ಪ್ರಸ್ತಾವ ಏನೆಂದರೆ:–

ಅಧ್ಯಕ್ಷರು : "ಖಂಡ 2 ಹಾಗೂ 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಹಾಗೂ 3, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2006

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, "2006ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

2006ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದಿದೆ. ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು. ಪ್ರಸ್ತಾವದ ....

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದರ ಮೇಲೆ ಚರ್ಚೆಯಾಗಬೇಕು.

(ಗೊಂದಲ)

ಅಧ್ಯಕ್ಷರು : ಇದು ಚರ್ಚೆ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು : ಚರ್ಚೆಯಾಗಿದೆಯಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾವಾಗ ಚರ್ಚೆಯಾಯಿತು?

ಅಧ್ಯಕ್ಷರು : ಬಜೆಟ್‌ನಲ್ಲಿ ಮಾತನಾಡುವಾಗ ಇದರ ಬಗ್ಗೆ ಎಲ್ಲ ....

ಶ್ರೀ ಜೆ.ಸಿ. ಮಾಧುಸ್ವಾಮಿ : ತೆರಿಗೆಯ provision ಗೆ ತಿದ್ದುಪಡಿಯಾಗಿರುವ ಬಗ್ಗೆ ಇಲ್ಲಿ ಚರ್ಚೆಯಾಗಿದೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮೌಲ್ಯ ವರ್ಧಿತ ತೆರಿಗೆಯ ಬಗ್ಗೆ ನೀವಿಲ್ಲಿ ಮಂಡಿಸುತ್ತಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೌಲ್ಯ ವರ್ಧಿತ ತೆರಿಗೆ ತಿದ್ದುಪಡಿ Act ಇಲ್ಲಿ ಯಾವಾಗ ಚರ್ಚೆಯಾಗಿದೆ?

ಅಧ್ಯಕ್ಷರು : ಬಜೆಟ್ proposals ಬಗ್ಗೆ discuss ಮಾಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಬಜೆಟ್‌ಗೆ ಸಂಬಂಧಪಟ್ಟಿದ್ದಲ್ಲ. ಮೌಲ್ಯ ವರ್ಧಿತ ತೆರಿಗೆಯಲ್ಲಿ . . . . .

ಅಧ್ಯಕ್ಷರು : ಬಜೆಟ್ ಮೇಲೆ ಮಾತನಾಡುವಾಗ ನೀವು ಇದಕ್ಕೆ ಹೇಳಲಿಲ್ಲವೇ? ಆಯಿತು. ಏನಾದರೂ ಇದ್ದರೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಏನಾದರೂ ಇದ್ದರೆ ಹೇಳಿ ಅಲ್ಲ, ಈಗ ಇದನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಇನ್ನೊಂದಿಷ್ಟು ಚರ್ಚೆಯಾಗಲಿ. ಇದು ನಿಧಾನಕ್ಕೆ pass ಆಗಲಿ ಬಿಡಿ. ಏನಾಗಬೇಕು? ಸರ್, ಇದಕ್ಕೂ ನಿಮ್ಮ ಬಜೆಟ್‌ಗೂ ಸಂಬಂಧವಿಲ್ಲ. ಇದು tax law amend ಆಗುವುದು, 3ನೇ ತಾರೀಖು ಆಗಲಿ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಬಜೆಟ್ proposal ....

ಶ್ರೀ ಜೆ.ಸಿ. ಮಾಧುಸ್ವಾಮಿ : ಇದಕ್ಕೆ ಸಂಬಂಧವಿಲ್ಲ ಸರ್. ಮೌಲ್ಯ ವರ್ಧಿತ ತೆರಿಗೆ ತಿದ್ದುಪಡಿಯೇ ಬೇರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, Financial bill ಎಲ್ಲಾ pass ಆಯಿತಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಇವತ್ತು ಆಗಬೇಕಾದ ಅಗತ್ಯವಿಲ್ಲ ಸರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೌಲ್ಯವರ್ಧಿತ ತೆರಿಗೆ ಬಿಲ್ ಬಗ್ಗೆ ಇಲ್ಲಿ ಚರ್ಚೆಯಾಗಲಿಲ್ಲ.

ಅಧ್ಯಕ್ಷರು : ಆಯವ್ಯಯ ಪತ್ರದಲ್ಲಿ ಏನು ಪ್ರಸ್ತಾವನೆಗಳನ್ನು ಮಾಡಿದ್ದಾರೆ, ಅದನ್ನು ಜಾರಿಗೊಳಿಸುವುದಕ್ಕಾಗಿ ಸಂಬಂಧಪಟ್ಟ ವಿಷಯಗಳಿಗೆ ಅಂದರೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2006ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವಾಗಿದೆಯೆಂದು ಪರಿಗಣಿಸಲಾಗಿದೆ. ಆದ್ದರಿಂದ, ಬಜೆಟ್ ಮೇಲೆ ಚರ್ಚೆಯಾಗುವಾಗ ಅದು cover ಆಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ಇದು ನೀವು ಮೌಲ್ಯವರ್ಧಿತ ತೆರಿಗೆ ಬಿಲ್‌ಗೆ amendment ತರುತ್ತಿರುವುದು ಇಲ್ಲಿ ಚರ್ಚೆಯಾಗಲಿ ಬಿಡಿ. ಇದಕ್ಕೇನು ಇವತ್ತೇ . . . . .

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಿದ್ದುಪಡಿ ತರುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಜೊತೆಗೇ ಇದನ್ನು pass ಮಾಡಬೇಕು. ದಯವಿಟ್ಟು.

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾವ item change ಮಾಡುತ್ತಿದ್ದೀರಿ? ಯಾವುದು first, second, third schedule ನಲ್ಲಿ ಬರುತ್ತದೆ? ಇದು ನಮಗೇನೂ ಅರ್ಥವಾಗುವುದು ಬೇಡವೇ? ಈ ರಾಜ್ಯದಲ್ಲಿ tax ಹೆಚ್ಚು ಹಾಕುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಶ್ರೀರಾಮರೆಡ್ಡಿಯವರೆ, ಒಂದು ನಿಮಿಷ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ಇದರ ಬಗ್ಗೆ ವಿವರಿಸಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇದು ಉದ್ದೇಶ ಮತ್ತು ಕಾರಣಗಳು ಹೀಗಿವೆ, ಆಯವ್ಯಯ ಪತ್ರದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಕೆಲವು ಅನುಪಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನೂ ಸಹ ಮಾಡಲಾಗಿದೆ. ಆದುದರಿಂದ, ಈ ವಿಧೇಯಕವನ್ನು ನಾನು ಮಂಡಿಸುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇವತ್ತಿನ ಆಯವ್ಯಯವನ್ನೂ ಪಾಸ್ ಮಾಡಿಕೊಳ್ಳುವುದಕ್ಕೂ ಈ ವಿಧೇಯಕಕ್ಕೂ ಯಾವುದೇ ಸಂಬಂಧವಿಲ್ಲ. ಕಾನ್ಸಿಕ್ವೆನ್ಸಿಯಲ್ ಬಿಲ್ ಅಲ್ಲ ಅದು. ಮೂಲ ಬಿಲ್‌ಗೆ ನೀವು ತಿದ್ದುಪಡಿ ತರುತ್ತಿರುವುದು

ಶ್ರೀ ಬಿ.ಎಸ್.ಯಡಿಯೂರಪ್ಪ : ಪ್ರತಿ ಸಾರಿಯೂ ಬಜೆಟ್ ಪಾಸ್ ಆದ ಮೇಲೆ ಇದು ಬರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಪ್ರತಿ ಈ ಬಿಲ್‌ಗೂ ಇವತ್ತಿನ ಕಾರ್ಯಕ್ರಮಕ್ಕೂ ಯಾವುದೇ ಸಂಬಂಧವಿಲ್ಲ. ಎಲ್ಲಿದೆ ಸ್ವಾಮಿ? ಹಾಗಾದರೆ ನಮಗೆ ಚರ್ಚೆ ಮಾಡಲಿಕ್ಕೆ ಹೇಳಿ.

ಅಧ್ಯಕ್ಷರು : ಬಜೆಟ್‌ನಲ್ಲಿ ಇದೆ. ಅದನ್ನು ಅನ್ವಯ ಮಾಡಿಕೊಳ್ಳುವುದಕ್ಕಾಗಿ ಕೆಲವು ಅಮೆಂಡ್‌ಮೆಂಟ್‌ಗಳನ್ನು ಮೌಲ್ಯವರ್ಧಿತ ತೆರಿಗೆಗೆ ತಂದಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಕಾನ್ಸಿಕ್ವೆನ್ಸಿಯಲ್ ಬಿಲ್ ಅಲ್ಲ, ನಾವು ಹೇಳುತ್ತಿರುವುದು ಇವತ್ತು ಪಾಸಾಗಬೇಕಾಗಿರುವ ಅಪ್ರೋಪ್ರಿಯೇಷನ್ ಬಿಲ್‌ಗೂ ಈ ಬಿಲ್‌ಗೂ ಸಂಬಂಧವಿಲ್ಲ. ಇದು ಒರಿಜನಲ್ ವ್ಯಾಟ್‌ಗೆ ಅಮೆಂಡ್‌ಮೆಂಟನ್ನು ಪ್ರಪೋಸ್ ಮಾಡಿರುವುದು. ಇದರಲ್ಲಿ ಯಾವ್ಯಾವ ಅಧಿಕಾರಿಗಳು ಇರಬೇಕು, ಎಷ್ಟು ಕಡಿಮೆ ಮಾಡಬೇಕು, ಎಷ್ಟು ಜಾಸ್ತಿಯಾಗಬೇಕು ಎನ್ನುವುದರ ಬಗ್ಗೆ ಚರ್ಚೆಯಾಗಿ ಯಾವ ಐಟಂನ್ನು ಷೆಡ್ಯೂಲ್ಡ್ ಛೇಂಜ್ ಮಾಡಬೇಕು, ಯಾವ್ಯಾವ ಐಟಂಗೆ ರಿಯಾಯಿತಿ ಕೊಡಬೇಕು, ಇದೆಲ್ಲಾ ವ್ಯಾಟ್ ಲಾ ನಲ್ಲಿ ಬರುತ್ತದೆ. ದಯಮಾಡಿ ಇದನ್ನು ಇನ್ನೊಂದು ದಿವಸ ಚರ್ಚೆಗೆ ಅವಕಾಶ ಮಾಡಿಕೊಡಿ, ಅಥವಾ ಮಧ್ಯಾಹ್ನ ತೆಗೆದುಕೊಳ್ಳಿ.

ಅಧ್ಯಕ್ಷರು : ಇದು ಫೈನಾನ್ಸ್ ಬಿಲ್ ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉದ್ದೇಶದಲ್ಲಿ ನೀವು ಏನು ಹೇಳಿದಿರಿ? ತಿದ್ದುಪಡಿ ಮಾಡಿದಂತೆ ಪರಿಗಣಿಸುವುದು ಯಾವುದಕ್ಕೆ? ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ಕ್ಕೆ ..

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದ್ನಿಮಿಷ ಕೇಳಿ. ನಾನು ಕ್ಲಾರಿಫೈ ಮಾಡುತ್ತೇನೆ. ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ ಪಾರ್ಟಿ ಆಫ್ ಟ್ಯಾಕ್ಸೇಷನ್ ಬಿಲ್, ಈ ಅಧಿನಿಯಮ ಮೂಲ ಕನ್ನಡದಲ್ಲಿ ಇರುವುದರಿಂದ ಕನ್ನಡದಲ್ಲಿ ಇರುವುದರಿಂದ ಕನ್ನಡದಲ್ಲಿ ತಿದ್ದುಪಡಿ ವಿಧೇಯಕವನ್ನು ಮಂಡಿಸುತ್ತಿದ್ದೇನೆ ಅಷ್ಟೆ..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಹೇಳಿರುವ ಉದ್ದೇಶದಂತೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಏಕೆ ಏನು ಅವಶ್ಯಕತೆ ಇದೆ? ಇದನ್ನು ನೀವು ಹೇಳಬೇಕಲ್ಲವೆ? ಎಕ್ಸ್‌ಪ್ಲೇನ್ ಮಾಡಬೇಕು ಅಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯವ್ಯಯದಲ್ಲಿ ಮಾಡಿದಂಥ ಪ್ರಸ್ತಾವನೆಯನ್ನು ಜಾರಿಗೊಳಿಸುವುದಕೋಸ್ಕರ ಅದಕ್ಕೆ ಸಂಬಂಧಪಟ್ಟ ವಿಷಯಗಳು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರಲ್ಲಿ ತಿದ್ದುಪಡಿ ಯಾಗಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆನುಪಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ, ಯಾವಾಗ ಮಾಡಿದಿರಿ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ ಈಗ ಬಜೆಟ್‌ನಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಯಾವ್ಯಾವ ಟ್ಯಾಕ್ಸೇಷನ್ ಬಗ್ಗೆ, ರಿಜಿಸ್ಟ್ರೇಷನ್ ಆ್ಯಕ್ಟ್ ಇರಬಹುದು, ಮಾಲ್ಯವರ್ಧಿತ ಕಾನೂನು ಇರಬಹುದು, ಇದಕ್ಕೆ ಏನೇನು ಬಜೆಟ್‌ನಲ್ಲಿ ಅವರು ಪ್ರಾವಿಜನ್ ಮಾಡಿದ್ದಾರೆ ಅದಕ್ಕೆ ಪೂರಕವಾಗಿ ಈ ಬಿಲ್‌ಗಳನ್ನು ಈ ಕಾನೂನಿನಲ್ಲಿ ತಿದ್ದುಪಡಿಯನ್ನು ತರಬೇಕಾಗುತ್ತದೆ. ಬಜೆಟ್ ಬಗ್ಗೆ ಕಳೆದ ಒಂದು ವಾರದಿಂದ ಚರ್ಚೆಯಾಗಿದೆ. ಬಜೆಟ್‌ನಲ್ಲಿ ಇದರ ಬಗ್ಗೆ ಏನೇನು ಆಲ್ಟರೇಷನ್ ಮಾಡಿದ್ದಾರೆ, ರಿಜಿಸ್ಟ್ರೇಷನ್ ಆ್ಯಕ್ಟ್‌ನಲ್ಲಿ ಏನೇನು ಮಾಡಿದ್ದಾರೆ, ಅದು ಬಜೆಟ್‌ನಲ್ಲೇ ಆಗಿದೆ, ಒಂದು ವಾರದಿಂದ ಅದನ್ನೇ ಚರ್ಚೆ ಮಾಡಿದಿರಿ. ಬಜೆಟ್‌ನಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಬಜೆಟ್‌ನಲ್ಲಿ ಎಲ್ಲಾ ವಿಷಯವನ್ನೂ ಮಂಡನೆ ಮಾಡಿದ್ದಾರೆ. ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಟಿದ್ದಾರೆ, ಅದಕ್ಕೆ ಪೂರಕವಾಗಿ ಈ ಕಾನೂನು ತಿದ್ದುಪಡಿಯನ್ನೂ ಮಾಡಬೇಕಾಗುತ್ತದೆ.

ಅಧ್ಯಕ್ಷರು : ನೋಡಿ, ಆಯವ್ಯಯದಲ್ಲಿ ಏನು ಒಂದು ಪ್ರಸ್ತಾವನೆಗಳನ್ನು ತಂದಿದ್ದಾರೆ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗಿ ಕೆಲವು ತಿದ್ದುಪಡಿಗಳನ್ನು ತರಬೇಕಾಗುತ್ತದೆ ಇವು ಮನಿ ಬಿಲ್ಸ್, ಬಜೆಟ್ ಆದ ಮೇಲೆ ಪ್ರತಿ ವರ್ಷ ಹಿಂದಿನಿಂದಲೂ ಪಾಸ್ ಆಗಿದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಮನಿ ಬಿಲ್ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಜೆಟ್ ಭಾಷಣದ ಪುಟ– 74 ನೋಡಿ.

ಅಧ್ಯಕ್ಷರು : ಬಜೆಟ್ ಜೊತೆಗೆ ಇವೆಲ್ಲಾ ಪಾಸ್ ಆಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ಸಾರ್, ಪಾಸ್ ಆಗಲಿಕ್ಕೆ ಆಗುವುದಿಲ್ಲ. ಚರ್ಚೆ ಮಾಡಲೇಬೇಕು. ಇಲ್ಲಿ ನೀವು ಹೇಳಿದಿರಲ್ಲಾ ಸಾರ್. ಬಂಡವಾಳ ಸರಕು, ಶೀತಲ ಸಂಗ್ರಹಗಾರ, ಅದೇ ತರಹದ ಸ್ಥಾವರ, ಯಂತ್ರೋಪಕರಣ, ಸರಕು ಸಾಗಾಣಿಕ ವಾಹನಗಳು, ಸಲಕರಣೆಗಳು, ಮೌಲ್ಡ್‌ಗಳು, ಇವೆಲ್ಲವನ್ನೂ ನಾವು ಚೇಂಜ್ ಮಾಡುತ್ತೇವೆಂದು ಬಜೆಟ್‌ನಲ್ಲಿ ನಮಗೆ ಹೇಳಿದ್ದಿರಾ? Have you told that in the schedule? - ಏನೇನು ಷೆಡ್ಯೂಲ್ಡ್‌ಗಳಿವೆ, ಯಾವ್ಯಾವ ಷೆಡ್ಯೂಲ್ಡ್‌ಗಳಿಂದ ಯಾವ್ಯಾವ ಷೆಡ್ಯೂಲ್ಡ್‌ಗಳಿಗೆ ಛೇಂಜ್ ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಆಯವ್ಯಯ ಭಾಷಣ ಪುಟ – 74ರಲ್ಲಿ ಮೌಲ್ಯವರ್ಧಿತ ತೆರಿಗೆ – ಸಭಾಧ್ಯಕ್ಷರೆ, 2005ನೇ ಏಪ್ರಿಲ್ 1ರಿಂದ ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ಜಾರಿಗೊಳಿಸಲಾಗಿದ್ದು, ಆರಂಭದ ಎಡರು ತೊಡರುಗಳನ್ನು ಹೊರತುಪಡಿಸಿದಂತೆ ಅದನ್ನು ಸುಲಭವಾಗಿ ಜಾರಿಗೊಳಿಸಲಾಗಿರುತ್ತದೆ. ಈ ಹೊಸ ತೆರಿಗೆ ವ್ಯವಸ್ಥೆಯ ಲಾಭ ಸರಕುಗಳ ಬೆಲೆ ಇಳಿತದ ಮೂಲಕ ಗ್ರಾಹಕರಿಗೆ ಇನ್ನೂ ಸಂಪೂರ್ಣವಾಗಿ ತಲುಪದಿದ್ದರೂ ಕೂಡ, ರಾಜ್ಯದ ವಾಣಿಜ್ಯ ಮತ್ತು ಉದ್ಯಮಗಳು ಇದರಿಂದ ಗಣನೀಯವಾಗಿ ಲಾಭ ಪಡೆದಿರುತ್ತವೆ. ಮೌಲ್ಯವರ್ಧಿತ ತೆರಿಗೆ ಜಾರಿಯ ಮೊದಲ ವರ್ಷದಲ್ಲಿ ಹಿಂದಿನ ಮಾರಾಟ ತೆರಿಗೆ ವ್ಯವಸ್ಥೆಯಡಿ ಆಧಾಯದ ಅಂದಾಜಿಗೆ ಹೋಲಿಸಿದಲ್ಲಿ ನಮ್ಮ ತೆರಿಗೆ ಆದಾಯದಲ್ಲಿ ಸುಮಾರು 2160 ಕೋಟಿ ರೂಪಾಯಿಗಳ ಇಳಿತವಾಗುವ ಅಂದಾಜಿತ್ತು. ಇತ್ತೀಚಿನ ಅಂದಾಜಿನಂತೆ ತೆರಿಗೆ ಆದಾಯದಲ್ಲಿನ ಇಳಿತ ಸುಮಾರು 1200 ಕೋಟಿ ರೂಪಾಯಿಗಳಾಗಬಹುದೆಂದು ನಿರೀಕ್ಷಿಸಲಾಗಿದೆ. ಇದು ಒಂದು ಒಳ್ಳೆಯ ಬೆಳವಣಿಗೆಯಾಗಿದ್ದು, ಈ ಹೊಸ ತೆರಿಗೆ ವ್ಯವಸ್ಥೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿ ಮಾಡಲು ನನಗೆ ಉತ್ತೇಜನ ನೀಡಿರುತ್ತದೆ. ತಾನು ಕೊಟ್ಟ ಮಾತಿನಂತೆ ಕೇಂದ್ರ ಸರ್ಕಾರ ಮೌಲ್ಯವರ್ಧಿತ ತೆರಿಗೆ ಜಾರಿಯ ಮೊದಲ ವರ್ಷದ ಆದಾಯ ಇಳಿತವನ್ನು ರಾಜ್ಯ ಸರ್ಕಾರಕ್ಕೆ ಸಂಪೂರ್ಣವಾಗಿ ತುಂಬಿ ಕೊಡುತ್ತಾ ಬಂದಿರುತ್ತದೆ. ಇದೇ ರೀತಿಯ ಸಹಕಾರವನ್ನು ಕೇಂದ್ರ ಮಾರಾಟ ತೆರಿಗೆಯಡಿಯ ಸುಧಾರಣೆ ಮತ್ತು ಸೇವೆಗಳ ಮೇಲಿನ ತೆರಿಗೆ ವಿಷಯಗಳಲ್ಲಿಯೂ ಕೂಡ ಕೇಂದ್ರ ಸರ್ಕಾರದಿಂದ ನಾವು ನಿರೀಕ್ಷಿಸಿರುತ್ತೇವೆ. ಇದನ್ನು ಹೇಳುತ್ತಾ ಸ್ಪಷ್ಟವಾಗಿ ಶಾಸನ ರಚನಾ ಬಗ್ಗೆ ಜ್ಞಾಪನದ ಎಲ್ಲಾ ವಿವರವನ್ನು ಒದಗಿಸಿ ಕೊಟ್ಟಿದ್ದೇನೆ. ದಯಮಾಡಿ ಸಹಕರಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಶಾಸನಕ್ಕೆ ತಾವು ತಿದ್ದುಪಡಿ ತರುತ್ತಿದ್ದೀರಿ, ದಯಮಾಡಿ ಅದನ್ನು ಇಲ್ಲಿ ಚರ್ಚೆ ಮಾಡಬೇಕು. ಯಾವ್ಯಾವ ಷೆಡ್ಯೂಲನ್ನು ಚೇಂಜ್ ಮಾಡುತ್ತೀರಿ? ಈಗ ಈ ವ್ಯಾಟ್ ಬಂದ ಮೇಲೆ ಬಜೆಟ್ ಅರ್ಥವಾಗುವುದೇ ತಪ್ಪು ಎನ್ನುವ ಹಾಗೆ ಆಗಿ ಬಿಟ್ಟಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇದು ಅಮೆಂಡ್‌ಮೆಂಟ್ಸ್‌ನ್ನು ತಂದಿರುವಂಥಾದ್ದು ಪಾರ್ಟ್ ಆಫ್ ದಿ ಫೈನಾನ್ಸ್, ಬಿಲ್‌ನ ಭಾಗ ಆಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಅಮೆಂಡ್‌ಮೆಂಟ್ಸ್‌ನ್ನು ತಂದಿರುವಂಥಾದ್ದು ಪಾರ್ಟ್ ಆಫ್ ದಿ ಫೈನಾನ್ಸ್, ಬಿಲ್‌ನ ಭಾಗ ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಹೇಗೆ ಎಂದರೆ ನಾನು ಏನು ಹೇಳಲಿ?

ಶ್ರೀ ಜೆ.ಸಿ.ಮಾಧುಸ್ವಾಮಿ : ಹೇಳಬೇಕು ಸಾರ್, ನನಗೆ ಗೊತ್ತಿಲ್ಲ ನಾನು ತಿಳಿದುಕೊಳ್ಳಬೇಕು ಹೇಗೆ ಎಂದು ನೀವು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಏನು ಕೇಳಬೇಕು ಅದನ್ನು ಹೇಳಿ, ನಾನು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ವ್ಯಾಟ್ ಬಿಲ್ ಅಮೆಂಡ್‌ಮೆಂಟ್ ಮಾಡುವುದಕ್ಕೂ ನಿಮ್ಮ ಫೈನಾನ್ಸಿಯಲ್ ಬಿಲ್‌ಗೂ ಏನು ಸಂಬಂಧ ಎಂದು ಅಧಿಕಾರಿಗಳು ಇಲ್ಲಿ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಫೈನಾನ್ಸ್ ವಿಚಾರಗಳು ಬಜೆಟ್‌ನಲ್ಲಿ ಚರ್ಚೆಯಾಗಿ ಪಾಸ್ ಆಗಿದೆ.

Sri J. C. MADHUSWAMY : No, no, this is a Procedural Bill. ವ್ಯಾಟ್‌ನಲ್ಲಿ ಯಾವ್ಯಾವ ಐಟಂನ್ನು ಎಲ್ಲಿಯವರೆಗೆ ಮಾಡಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನು ಕೇಳಬೇಕು ಕೇಳಿ ನಾನು ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬಿಲ್ ಬಗ್ಗೆ ನಮಗೆ ಮಾಹಿತಿ ಇಲ್ಲ, ಸ್ವಲ್ಪ ಮಾಹಿತಿ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬಿಲ್‌ಬಗ್ಗೆ ತಾವು ಎಕ್ಸ್‌ಪ್ಲೇನ್ ಮಾಡಬೇಕು. ಯಾವ್ಯಾವ ಷೆಡೂಲ್‌ನಲ್ಲಿ ಯಾವ್ಯಾವ ಐಟಂಗೆ ತಾವು ಅಮೆಂಡ್‌ಮೆಂಡ್ ಪ್ರಪೋಸ್ ಮಾಡಿದ್ದೀರಿ ಎಂಬುದನ್ನು ನಮಗೆ ಹೇಳಬೇಕು. ಏಕೆ ಮಾಡಿದಿರಿ ಎಂದು ಹೇಳಬೇಕು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಇದೇ ಉದ್ದೇಶಕ್ಕೆಂದು ಹೇಳುತ್ತಿದ್ದೇನಲ್ಲಾ?

(ಗೊಂದಲ)

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಬಜೆಟ್ ಮೇಲೆ ತಾವು ಡಿಸ್‌ಕಷನ್ ಮಾಡಿದಿರಿ. ಇದು ಮನಿ ಬಿಲ್, ಬಜೆಟ್‌ನಲ್ಲಿ ಏನು ಪ್ರಪೋಸಲ್ಸ್ ಮಾಡಿದ್ದಾರೆ..

(ಗೊಂದಲ)

ಶ್ರೀ ಎಸ್. ರಾಜೇಂದ್ರನ್ : ನಮಗೆ ಗೊತ್ತಿಲ್ಲ, ಅವರು ಹೇಳಬೇಕು ಅಲ್ಲವೆ? You must explain to us.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ತಾವು ಆ ರೀತಿ ಹೇಳಬಾರದು.

ಅಧ್ಯಕ್ಷರು : ಕೆಲವು ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ಆದ್ದರಿಂದ ಮನಿಬಿಲ್ ಪಾಸ್ ಮಾಡಲೇಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಹೇಳಿದಂತೆ ವಿವರಗಳೆಲ್ಲಾ ಇಲ್ಲಿ ಇವೆ. ಈಗ ಒಂದನೇ ಅನುಸೂಚಿ ಐದನೇ ಪ್ರಕರಣದಡಿಯಲ್ಲಿ 'ತೆರಿಗೆಯಿಂದ ವಿನಾಯಿತಿಗೊಳಿಸುವ ಸರಕುಗಳು'. ಅದನ್ನು ಆಯವ್ಯಯದಲ್ಲಿ ಆ ವಿಚಾರವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ತಾವು ಹೇಳಿದಂತೆ ಕ್ರಮ ಸಂಖ್ಯೆ : 4 ನೋಡಿ. 'ಪಶು ಆಹಾರ ಮತ್ತು ಪೂರಕ ಆಹಾರಗಳು' ಎಂದರೆ, ಕೋಳಿ ಆಹಾರ, ಜಾನುವಾರು ಆಹಾರ, ಹಂದಿ ಆಹಾರ, ಈ ರೀತಿಯ ವಿವರಗಳನ್ನು ಎಲ್ಲಿ ಕೊಟ್ಟಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಬಜೆಟ್ ಬುಕ್‌ದಲ್ಲಿ ಯಾವ ಪಾರ್ಟ್‌ನಲ್ಲಿ ಹೇಳಿದ್ದಾರೆ ಹೇಳಿ ಸ್ವಾಮಿ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಅವೆಲ್ಲವೂ ನಿಯಾಮಾವಳಿಗಳಲ್ಲಿ ಬರುತ್ತವೆ. ಒಂದು ನಿಮಿಷ ತಾವು ಗಮನಿಸಬೇಕು ಯಾವ್ಯಾವುದನ್ನು ನಾವು ಆಯವ್ಯಯದಲ್ಲಿ ಅಳವಡಿಸಿಕೊಂಡಿರುತ್ತೇವೆ, ರಿಯಾಯತಿ ಕೊಡತಕ್ಕಂಥದ್ದು ಇರುತ್ತದೆ, ಅದಕ್ಕೆ ಸಂಬಂಧಪಟ್ಟ concomitant legislationನ್ನು – ನಾವು ತರಬೇಕಾಗುತ್ತದೆ. ದಯಮಾಡಿ ಇಲ್ಲಿ ಕೇಳಿ ಸಾರ್. ಈಗ ನೋಡಿ ಈ ವಿವರಗಳು ಎಲ್ಲವೂ ಇರತಕ್ಕಂಥಾದ್ದರಲ್ಲಿ ಈ ವಿಚಾರಗಳನ್ನು ಒಂದನೆ ಅನುಸೂಚಿಯಲ್ಲಿ ಕೊಟ್ಟಿದ್ದಾರೆ.ಅದಕ್ಕೆ ಸಂಬಂಧಪಟ್ಟಿದ್ದರ ಬಗ್ಗೆ concomitant legislation ನ್ನು ತಂದಿದ್ದಾರೆ. ಇದು ಅಗತ್ಯವೆ ಆಗಿದೆ. ಇಲ್ಲದಿದ್ದರೆ ಬರೀ ಬಜೆಟ್ ಮೇಲೆ ಹೇಳಿರತಕ್ಕಂಥ ವಿಷಯಗಳನ್ನು ಅಲ್ಲಿಗೇ ಕೈ ಬಿಟ್ಟು ಕಾನೂನಿಗೆ ತಿದ್ದುಪಡಿ ತರದಿದ್ದರೆ, ಅದನ್ನು ನಾವು ಜಾರಿಗೊಳಿಸಲಿಕ್ಕೆ ಆಗುವುದಿಲ್ಲ, ಆ ಕಾರಣಕ್ಕಾಗಿ ಪ್ರತಿ ಅಧಿವೇಶನದಲ್ಲೂ ಕೂಡ ಇದು ಒಂದು ಪದ್ಧತಿ ಅಂತಲ್ಲ ಕರ್ತವ್ಯ ಮತ್ತು ಆಗಲೇಬೇಕಾಗಿರತಕ್ಕಂಥಾದ್ದು, ಆದುದರಿಂದ ಅದಕ್ಕೆ ಸಂಬಂಧಪಟ್ಟಂಥ ಪೂರಕ ವಿಧೇಯಕದಲ್ಲಿ ತಿದ್ದುಪಡಿಗಳನ್ನು ತಂದಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ವ್ಯಾಟ್ ಬಿಲ್‌ಗೂ ನಿಮ್ಮ ಸಬ್ಸಿಡಿಯಲ್ಲಿ ಬಿಲ್‌ಗೂ ಏನು ಸಂಬಂಧ ಎಂದು ಸ್ವಲ್ಪ ಕನ್‌ವಿನ್ಸ್ ಮಾಡಿ ಸಾರ್.

ಶ್ರೀ ಎಂ.ಪಿ.ಪ್ರಕಾಶ್ : ಇಲ್ಲಿ ನೋಡಿ ಮೌಲ್ಯವರ್ಧಿತ ತೆರಿಗೆಯಲ್ಲಿ ಕೆಲವು ಬದಲಾವಣೆಗಳನ್ನು ...

Sri J.C. MADHUSWAMY :- No, no, you have changed some policies.

ಶ್ರೀ ಎಂ.ಪಿ.ಪ್ರಕಾಶ್ : ಇಲ್ಲಿ ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದನ್ನೇ ಚರ್ಚೆ ಮಾಡುವುದು ಬೇಡವೆ?

ಶ್ರೀ ಎಂ.ಪಿ.ಪ್ರಕಾಶ್ : ಚರ್ಚೆ ಆಗಲಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಜಿಲ್ಲೆ ಕಲ್ಲು ಇರುವುದನ್ನು ಗ್ರಾನೈಟ್‌ಗೆ ಆ್ಯಡ್ ಮಾಡಿದಿರಿ ಎಂದು ಹೇಳುತ್ತೀರಿ.

ಶ್ರೀ ಎಂ.ಪಿ.ಪ್ರಕಾಶ್ : ಚರ್ಚೆಯಾಗಲಿ, ಚರ್ಚೆಯಾಗುವುದರ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಅದನ್ನೇ ಕೇಳುತ್ತಿರುವುದು, ಚರ್ಚೆ ಮಾಡಿ ಎಂದು ಕೇಳುತ್ತಿರುವುದು.

ಶ್ರೀ ಎಂ.ಪಿ.ಪ್ರಕಾಶ್ : ಬಡ್ಜೆಟಿಗೂ ಮತ್ತು ಇದಕ್ಕೂ ಸಂಬಂಧವಿಲ್ಲ ಎನ್ನತಕ್ಕಂಥಾದ್ದಲ್ಲ. ತಾವು ಚರ್ಚೆ ಮಾಡಬೇಕು ಎಂದರೆ ಚರ್ಚೆ ಮಾಡಿ, ಸರಿಯಾದುದು ಇಲ್ಲವೆಂದು ಹೇಳುವುದಿದ್ದರೆ ಹೇಳಿ. ಪರ್ಯಾಲೋಚಿಸಬೇಕೆಂದು ಮಾನ್ಯ ಸಚಿವರು ಹೇಳಿದ ತಕ್ಷಣವೇ ತಾವು ಹೇಳಿದಿರಿ, ಅದಕ್ಕೆ ಸ್ಪೀಕರ್‌ರವರು ಅವಕಾಶ ಕೊಟ್ಟಿದ್ದರೆ ಮಾಡಿ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಪ್ರಕಾಶ್‌ರವರೇ, ಒಂದು ನಿಮಿಷ. ಇಲ್ಲಿ ನೀವು ತನ್ನ ಆವರಣದಲ್ಲಿ ವ್ಯಾಪಾರಿಯೊಬ್ಬ ನಡೆಸುವ ಕ್ಯಾಂಟಿನ್ ಅಥವಾ ಕೆಫಿಟೇರಿಯಾ ಅಥವಾ ರೆಸ್ಟೋರೆಂಟ್ ಅಥವಾ ಇತರ ಸೌಲಭ್ಯಗಳಲ್ಲಿ ತಯಾರಿಸಿದ ಆಹಾರಗಳ ವಸ್ತುಗಳು ಮತ್ತು ಪಾನೀಯಗಳ ಮಾರಾಟದ ಸಂಬಂಧದಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರಿದುಕೊಳ್ಳುವ ಬಗ್ಗೆ ಒಂದು ಕಾರ್ಖಾನೆ ಅಥವಾ ಇತರ ಕೈಗಾರಿಕಾ ಉದ್ಯಮ ಅಥವಾ ಇತರ ಸಂಸ್ಥೆಯು, ದಾಖಲು ಮಾಡಬೇಕಾದ ಮಾಸಿಕ ವಿವರ ಪಟ್ಟಿಯಲ್ಲಿ ಸಲ್ಲಿಸಬೇಕಾದ ವಿವರಗಳನ್ನು ನಿಯಮಿಸುವುದಕ್ಕಾಗಿ ಅಂಥ ವ್ಯಾಪಾರಿಗೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರ ಅಡಿಯಲ್ಲಿ ಮಾಡಿದ ಮುರುಗಡೆ ಮಾಡಲು . . . ಅಂತ ಇದೆ ಇವನ್ನು ನೀವು ಹೇಗೆ ಎಕ್ಸ್‌ಪ್ಲೇನ್ ಮಾಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಮಿಕ್ಕ ವಿಷಯಗಳನ್ನು ಇದರಲ್ಲಿ ಕೊಟ್ಟಿದ್ದೇವೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಏಕೆಂದರೆ ಕೆಲವು ಐಟಂಗಳನ್ನು ಸೇರ್ಪಡೆ ಮಾಡುತ್ತಿದ್ದೀರಿ. ಹೋಗಲಿ ಚರ್ಚೆ ಮಾಡುವುದು ಬೇಡ ಎಂದು ಹೇಳಿಬಿಡಿ. ನೋಡಿ ಫೈನಾನ್ಸ್ ಬಿಲ್‌ಗೂ ಈ ಬಿಲ್‌ಗೂ ಸಂಬಂಧವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಒಂದು Part of the Finance Bill.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೀವು ತಿದ್ದುಪಡಿ ತರುತ್ತಿದ್ದೀರಿ. ಏನು ತಿದ್ದುಪಡಿ ತರುತ್ತೀರಿ, ಏಕೆಂದು ಆದರೂ ಹೇಳಬೇಕು ಅಲ್ಲವೆ?

(ಗೊಂದಲ)

ಅಧ್ಯಕ್ಷರು : ಇದರಲ್ಲಿ ಉದ್ದೇಶಗಳು ಎಂದರೆ, ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಜಾರಿಗೊಳಿಸುವುದಕ್ಕಾಗಿ . . ಈ ತಿದ್ದುಪಡಿ ಮಾಡುವುದು ಅವಶ್ಯ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಯಾವ ಐಟಂ ಇದಕ್ಕೆ ಸೇರಿದೆ ಎಂಬುದನ್ನಾದರೂ ಹೇಳಬೇಕು ಅಲ್ಲವೆ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾವ ಬಿಲ್‌ನಲ್ಲಿ ಇದೆ?

ಶ್ರೀ ಬಿ.ಎಸ್.ಯಡಿಯೂರಪ್ಪ : ಎಲ್ಲಾ ಬಿಲ್‌ಗಳು ಒಂದನೇ ತಾರೀಖಿನಿಂದ ಜಾರಿಗೆ ಬರುವುದು, ಈ ಬಿಲ್ ಕೂಡ ಒಂದನೇ ತಾರೀಖಿನಿಂದ ಜಾರಿಗೆ ಬರುವುದು...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬಜೆಟ್ ಪುಸ್ತಕದ ಪೇಜ್ ನಂ.7 ರಲ್ಲಿರತಕ್ಕಂಥಾದ್ದನ್ನು ನಾವು ಒಪ್ಪುತ್ತೇವೆ. ಆದರೆ ತಾವು ತಂದಿರತಕ್ಕಂಥದ್ದರಲ್ಲಿ ಜಾಸ್ತಿ ಐಟಂಗಳಿವೆ.

ಅಧ್ಯಕ್ಷರು : ಏನಾದರೂ ವಿಚಾರಗಳು ಇದ್ದರೆ ಹೇಳಿ

ಶ್ರೀ ಬಿ.ಎಸ್.ಯಡಿಯೂರಪ್ಪ : ಜಾಸ್ತಿ ಏನೂ ನಾವು ಕೇಳಿಲ್ಲ. ಅದರಲ್ಲಿರತಕ್ಕಂಥ ಐಟಂಗಳ ಬಗ್ಗೆ ನಾವು ಕೇಳಿದ್ದೇವೆ.

ಅಧ್ಯಕ್ಷರು : ಏನಾದರೂ ವಿಚಾರಗಳು ಇದ್ದರೆ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸರಕುಗಳು ಬಾಟ್ಲಿಂಟ್, ಕ್ಯಾನಿಂಗ್ ಮತ್ತು ಪ್ಯಾಕಿಂಗ್‌ಗೆ ಶೇಕಡಾ ನಾಲ್ಕು ಆಗುತ್ತದೆಂದು ಹೇಳಿದ್ದೀರಿ. ಮೊದಲು ಇದಕ್ಕೆ ಎಷ್ಟಿತ್ತು ಈಗ ಏಕೆ ನಾಲ್ಕು ಪರ್ಸೆಂಟ್ ಆಗುತ್ತಿದೆ ಎಂಬುದನ್ನು ಹೇಳಬೇಕಲ್ಲವೆ? ಮತ್ತೆ ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು ಪ್ರಿಂಟ್ ಮಾಡುವುದು ಇದಕ್ಕೆ ಶೇಕಡಾ ನಾಲ್ಕು ಆಗುತ್ತದೆಂದು ಹೇಳುತ್ತಿದ್ದೀರಿ. ಮೊದಲು ಎಷ್ಟಿತ್ತು, ಈಗ ಜಾಸ್ತಿಯಾಗಿದೆಯೋ ಅಥವಾ ಕಡಿಮೆಯಾಗಿದೆಯೋ ಎನ್ನತಕ್ಕಂಥಾದ್ದು ನಮಗೆ ಗೊತ್ತಾಗಬೇಕಲ್ಲವೆ? ಮತ್ತೆ ಎಲೆಕ್ಟ್ರೋಪ್ಲೇಟಿಂಗ್, ಎಲೆಕ್ಟ್ರೋ ಗಾಲ್ವನೈಸಿಂಗ್, ಆನೋಡೈಜಿಂಗ್ ಮತ್ತು ಅಂಥವೇ ವಸ್ತುಗಳಿಗೆ ಶೇಕಡಾ ನಾಲ್ಕು ಆಗುತ್ತದೆಂದು ಹೇಳಿದ್ದೀರಿ. ಇವುಗಳಿಗೆ ಮೊದಲು ಎಷ್ಟಿತ್ತು ಈಗ ಏನು ಮಾಡಿದ್ದೇವೆ ಎನ್ನತಕ್ಕಂಥಾದ್ದು ತಾವು ಹೇಳಬೇಕು. ಈಗ ಮಾಡಿರತಕ್ಕಂಥಾದ್ದರಿಂದ ಲಾಸ್ ಅಥವಾ ಲಾಭ ಎಷ್ಟಾಗುತ್ತದೆ ಎನ್ನತಕ್ಕಂಥಾದ್ದು ತಾವು ಹೇಳಬೇಕಲ್ಲವೆ? You have to come prepared. ಮೊದಲು ಯಾವ ಶೆಡ್ಯೂಲ್‌ನಲ್ಲಿತ್ತೆಂದು ಮತ್ತು ಎಷ್ಟು ಪರ್ಸೆಂಟ್ ಟ್ಯಾಕ್ಸ್ ಈ ಐಟಂಗಳಿಗೆ ಇತ್ತೆಂಬುದರ ಬಗ್ಗೆ ಹೇಳಿ. ಏಕೆಂದರೆ ಇದರ ಬಗ್ಗೆ ಅಮೆಂಡ್‌ಮೆಂಟ್ ತಂದಿರುವುದರಿಂದ ತಾವು ಹೇಳಬೇಕಾಗುತ್ತದೆ. ಮತ್ತೆ ಲ್ಯಾಮಿನೇಷನ್ ರಬ್ಬರೈಸೇಷನ್. ಮತ್ತು ಅಂಥವೇ ಸಂಸ್ಕರಣ ಈ ಐಟಂಗಳಿಗೆ ಶೇಕಡಾ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಹಾಕುತ್ತೇವೆಂದು ಹೇಳುತ್ತಿದ್ದೀರಿ. ಆದ್ದರಿಂದ ಇದಕ್ಕೆ ಮೊದಲು 0,2,4 ಅಥವಾ 8 ಪರ್ಸೆಂಟ್ ಟ್ಯಾಕ್ಸ್ ಇತ್ತಾ ಎನ್ನತಕ್ಕಂಥಾದ್ದರ ಬಗ್ಗೆ ತಾವು ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ವಿಚಾರಗಳನ್ನು ಬಜೆಟ್‌ನಲ್ಲಿ ಹೇಳಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ವಿಚಾರಗಳನ್ನು ಬಜೆಟ್‌ನಲ್ಲಿ ತಾವು ಎಲ್ಲಿ ಹೇಳಿದ್ದೀರಿ? ಬಜೆಟ್ ಪುಸ್ತಕ ತೆಗೆದುಕೊಂಡು ನೋಡಿ.

ಶ್ರೀ ಎಂ.ಪಿ.ಪ್ರಕಾಶ್ : ಬಜೆಟ್‌ನಲ್ಲಿ ಈ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಜಾರಿಗೊಳಿಸುವುದಕ್ಕೆ ಬೇಕಾಗಿರತಕ್ಕಂಥ ಪೂರಕವಾದಂಥ ತಿದ್ದುಪಡಿಯನ್ನು ಈ ಕಾನೂನಿಗೆ ತಂದಿದ್ದಾರೆ. ತಾವು ಈಗಾಗಲೇ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೌಲ್ಯ ವರ್ಧಿತ ತೆರಿಗೆಗೆ ಏನು ತಿದ್ದುಪಡಿ ತಂದಿದ್ದೀರಿ ಈ ಯಾವುದೇ ಅಂಶಗಳನ್ನು ಜಾರಿಗೊಳಿಸುವುದಕ್ಕೆ ಯಾವುದೇ ಸಂಬಂಧ ಇಲ್ಲ. ಇಲ್ಲಿ ನೀವು ಶೆಡ್ಯೂಲ್ ತಂದು ಬದಲಾವಣೆ ಮಾಡುತ್ತಿದ್ದೀರಿ. ಇಲ್ಲಿ ಟ್ಯಾಕ್ಸ್ ವ್ಯತ್ಯಾಸವಾಗುತ್ತಿದೆ. ಇಲ್ಲಿ ಕೆಲವು ಐಟಂಗಳು ಅಟ್ರಾಕ್ಟ್ ಆಗುತ್ತಿವೆ.

ಅಧ್ಯಕ್ಷರು : ಏನಾದರೂ ಇದ್ದರೆ ಹೇಳಿ. ಇವೆಲ್ಲವೂ ಕೂಡ ಪಾರ್ಟ್ ಆಫ್ ದಿ ಫೈನಾನ್ಸ್ ಬಿಲ್. ಇವು ಫೈನಾನ್ಸ್ ಬಿಲ್‌ಗಳು ಪಾಸ್ ಆಗಬೇಕಾಗುತ್ತದೆ ಆದ್ದರಿಂದ ಹೇಳ ತಕ್ಕಂಥಾದ್ದು ಏನಾದರೂ ಇದ್ದರೆ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಬಜೆಟ್ ಈಗಾಗಲೇ ಪಾಸ್ ಆಗಿದೆ. ಆದ್ದರಿಂದ ಬಜೆಟ್‌ಗೆ ಸಂಬಂಧಪಟ್ಟಂಥ ಬಿಲ್ ಇದಾಗಿರುವುದರಿಂದ, ಇದನ್ನೂ ಕೂಡ ಪಾಸ್ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಏನಾದರೂ ಇದ್ದರೆ ಹೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಹೇಳುತ್ತಾರೆ ನಾವು ಹೇಳುತ್ತೇವೆ. ಯಾವುದನ್ನು ತಾವು ಕೇಳುತ್ತೀರಿ?

ಅಧ್ಯಕ್ಷರು : ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಏನಾದರೂ ಇದ್ದರೆ ಹೇಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಹಣಕಾಸಿನ ಸಚಿವರು ಬಜೆಟ್ ಪುಸ್ತಕದಲ್ಲಿ ಪೇಜ್ 74ರಲ್ಲಿರತಕ್ಕಂಥಾದ್ದನ್ನು ಓದಿದರು. ಅದರಲ್ಲಿರತಕ್ಕಂಥಾದ್ದು 13 ಐಟಂಗಳು ಆದರೆ, ಇದರಲ್ಲಿರತಕ್ಕಂಥದರಲ್ಲಿ 23 ಐಟಂಗಳಿವೆ. ಅಂದರೆ ಇಲ್ಲಿ 23 ಐಟಂಗಳು ಸೇರಿಸಿದ್ದೀರಿ ಆದರೆ ಬಜೆಟ್‌ನಲ್ಲಿ 13 ಐಟಂಗಳು ಮಾತ್ರ ಇವೆ. ಎಲೆಕ್ಟ್ರೋಪ್ಲೇಟಿಂಗ್ ಮತ್ತೆ ಇತರೇ ಐಟಂಗಳಿಗೆ ಶೇಕಡಾ ನಾಲ್ಕು ಎಂದು ಹೇಳಿದ್ದೀರಿ. ಆದ್ದರಿಂದ ನೀವು ಬಜೆಟ್‌ನಲ್ಲಿ ಯಾವ್ಯಾವುದನ್ನು ತಂದಿದ್ದೀರಿ ಮತ್ತು ಇಲ್ಲಿ ಎಷ್ಟು ಹೆಚ್ಚಿಗೆ ಆಗಿದೆ ಮತ್ತೆ ಹೆಚ್ಚಿಗೆ ಆಗಿರತಕ್ಕಂಥ ಐಟಂಗಳು ಯಾವುದು ಮತ್ತೆ ಏತಕ್ಕಾಗಿ ಇದಕ್ಕೆ ಟ್ಯಾಕ್ಸ್ ಹಾಕಬೇಕೆಂದು ತಾವು ಇದೆಲ್ಲ ಹೇಳಬೇಕಲ್ಲವೆ? ಆದ್ದರಿಂದ ನಾವು ಏನು ಹೇಳುತ್ತಿದ್ದೇವೆಂದರೆ, ...

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಈಗಾಗಲೇ ಬಜೆಟ್‌ನಲ್ಲಿ ಈ ವಿಚಾರವನ್ನು ಹೇಳಿದ್ದಾರೆ. ಅದನ್ನು ಅನುಷ್ಠಾನ ಮಾಡಬೇಕು. ಅದಕ್ಕೋಸ್ಕರ ಈ ತಿದ್ದುಪಡಿಗಳ ಅಗತ್ಯತೆ ಇದೆ ಎನ್ನುವ ಕಾರಣದಿಂದ ಇದನ್ನು ತಂದಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಕಾನೂನು ಪ್ರಕಾರ ಈ ಸದನ ನಡೆಯಬೇಕೆಂದು ಹೇಳತಕ್ಕಂಥಾದ್ದು ತಪ್ಪಾಗುತ್ತದೆಂದು ಹೇಳುವುದಾದರೆ ನಾವು ಏನನ್ನೂ ಹೇಳುವುದಿಲ್ಲ ಬಿಡಿ. ಬಜೆಟ್‌ನಲ್ಲಿ 13 ಐಟಂಗಳಿವೆ. ಆದರೆ ಇಲ್ಲಿ 23 ಐಟಂಗಳಿವೆ. ಆದ್ದರಿಂದ

ಇದನ್ನು ಹೇಗೆ ತರುತ್ತೀರಿ ಎಂದು ಕೇಳಿದರೆ ಇದಕ್ಕೆ ಸಂಬಂಧವೇ ಇಲ್ಲವೆಂದರೆ ನಾವೇನು ಮಾಡುವುದು? ಬಜೆಟ್ ಪುಸ್ತಕದಲ್ಲಿ 13 ಐಟಂಗಳಿವೆ, ಇಲ್ಲಿ 23 ಐಟಂಗಳಿವೆ. ಆದ್ದರಿಂದ ಇದು ಹೇಗಾಗುತ್ತದೆ?

ಅಧ್ಯಕ್ಷರು : ಬಜೆಟ್‌ನಲ್ಲಿರತಕ್ಕಂಥವೆಲ್ಲವೂ ಒಂದನೇ ಏಪ್ರಿಲ್ ತಿಂಗಳಿಂದ ಪ್ರಾರಂಭವಾಗುತ್ತದೆ. ಅದರಲ್ಲಿರತಕ್ಕಂಥ ಪ್ರೊಪೋಜಲ್ ಅನುಷ್ಠಾನ ಮಾಡುವುದಕ್ಕೋಸ್ಕರ ಈ ತಿದ್ದುಪಡಿಗಳು ಬೇಕಾಗುತ್ತವೆ. ಅದಕ್ಕೋಸ್ಕರ ತಂದಿದ್ದಾರೆ. ಇದೂ ಕೂಡ ಪಾರ್ಟ್ ಆಫ್ ದಿ ಬಜೆಟ್.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಬಜೆಟ್‌ನಲ್ಲಿ ಈಗಾಗಲೇ ತಂದಿದ್ದಾರೆ . . .

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ ಯೀಲ್ಡ್ ಆಗಿ ಸಾರ್. ಮಾನ್ಯ ಸಿದ್ದರಾಮಯ್ಯನವರೆ, ತಾವು ಸ್ವಲ್ಪ ಕೇಳಿ. ಅಧಿಕಾರಿಗಳಿಗೆ ಅಧಿಕಾರ ಕೊಡತಕ್ಕಂಥಾದ್ದನ್ನು ಬದಲಾವಣೆ ಮಾಡತಕ್ಕಂಥಾದ್ದು ಮತ್ತು ಪ್ರೊಸೀಜರ್ ಆಫ್ ಕಲೆಕ್ಷನ್, ಫೆನಾಲ್ಟಿ ಹಾಕುವುದು ಮತ್ತು ವೇವ್ ಮಾಡತಕ್ಕಂಥದಕ್ಕೆಲ್ಲಾ ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದು ಕಾನ್ಸಿಕ್ವೆನ್ಷಿಯಲ್ ಬಿಲ್ ಎಂದು ಇದನ್ನು ಕರೆಯಬಹುದೆ? ಆದ್ದರಿಂದ ಈ ಬಿಲ್ ಈಗ ಪಾಸ್ ಆಗತಕ್ಕಂಥಾದ್ದು ಬೇಕಾಗಿಲ್ಲವೆಂದು ನಾವು ಹೇಳುತ್ತಿದ್ದೇವೆ. ಇನ್ನೊಂದು ಸಾರಿ ಇದರ ಬಗ್ಗೆ ಚರ್ಚೆ ಮಾಡೋಣ. ಈಗ ಪಾಸ್ ಮಾಡಿ ತಾವು ಏನು ಮಾಡುತ್ತೀರಿ? ಇದಕ್ಕೂ ನಿಮ್ಮ ಬಜೆಟ್‌ಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೂ ಕೂಡ ಪಾರ್ಟ್ ಆಫ್ ದಿ ಬಜೆಟ್ ಸಾರ್.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ಸಾರ್.

(ಗೊಂದಲ)

ಅಧ್ಯಕ್ಷರು : ಮಾನ್ಯ ಎಂ.ಪಿ.ಪ್ರಕಾಶ್‌ರವರು ಏನು ಹೇಳುತ್ತಾರೆಂಬುದನ್ನು ಕೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಪಾರ್ಟ್ ಆಫ್ ದಿ ಬಜೆಟ್. ಆದ್ದರಿಂದ ಪಾಸ್ ಆಗಿದೆ ಎಂದು ಭಾವಿಸಿಕೊಳ್ಳಿ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಮಾಧುಸ್ವಾಮಿಯವರೆ, ದಯಮಾಡಿ ನಾನು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಇದು ಪಾರ್ಟ್ ಆಫ್ ದಿ ಬಜೆಟ್ ಎನ್ನುವುದಾದರೆ ಇದೂ ಕೂಡ ಪಾಸ್ ಆಗಿದೆ ಎಂದು ಭಾವಿಸಿಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ನಾವು ಈಗಾಗಲೇ ಬಜೆಟ್‌ನ್ನು ಪಾಸ್ ಮಾಡಿದ್ದೇವೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾವು ಇದನ್ನು ಪಾಸ್ ಮಾಡಿಲ್ಲ. ಇದು ಪಾರ್ಟ್ ಆಫ್ ದಿ ಬಜೆಟ್ ಎಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ಪಾಸ್ ಮಾಡಿಕೊಳ್ಳಿ. ನಾವು ಏನೂ ಅಡ್ಡಿ ಮಾಡುವುದಿಲ್ಲ. ಕಾನ್ಸಿಕ್ವೆನ್ಸಿಯಲ್ ಬಿಲ್ . . .

ಶ್ರೀ ಬಿ.ಎಸ್.ಯಡಿಯೂರಪ್ಪ : 1ನೇ ಏಪ್ರಿಲ್ ತಿಂಗಳಿಂದ ಇದು ಜಾರಿಗೆ ಬರಬೇಕಾಗಿದೆ. ನಿಮಗೆ ಏನು ಬೇಕೋ ಕೇಳಿ ಅದಕ್ಕೆ ಕ್ಲಾರಿಫಿಕೇಶನ್ ಕೊಡುತ್ತೇನೆ. ಇಲ್ಲಿ ಪಾಸ್ ಆದಮೇಲೆ ಇನ್ನು ಆ ಮನೆಗೆ ಕಳುಹಿಸಿಕೊಡಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮೊದಲೇ ಹೇಳದೇ ಇರತಕ್ಕಂಥಾದ್ದು ನಿಮ್ಮ ತಪ್ಪು. ಇದು ನಮ್ಮ ತಪ್ಪಲ್ಲ. ಫೈನಾನ್ಸ್ ಬಿಲ್‌ಗೆ ಇದು ಆಗಲೇ ಬೇಕು ಎಂದು ನಿಮಗೆ ಭಾವನೆಯಾದರೆ ಪಾಸ್ ಮಾಡಿಕೊಳ್ಳಿ. ನಮ್ಮ ಭಾವನೆಯಲ್ಲಿದು, you are doing some policies, you are changing some procedures, you are waiving some items.

ಅಧ್ಯಕ್ಷರು : ಆಯಿತು ಬಿಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಬಜೆಟ್ ಪುಸ್ತಕದ ಪೇಜ್ 76ರಲ್ಲಿ ಕೊಟ್ಟಿರತಕ್ಕಂಥಾದ್ದಕ್ಕೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಅದಲ್ಲದೆ ಇದರಲ್ಲಿ ಹೆಚ್ಚಿಗೆ ಐಟಂಗಳನ್ನು ಸೇರಿಸಿ ಮತ್ತೆ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿರತಕ್ಕಂಥಾದ್ದನ್ನು ಏನು ಬದಲಾವಣೆ ಮಾಡಿದ್ದೀರಿ. ಇದರ ಬಗ್ಗೆ ಉತ್ತರ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ಈಗ ದಯಮಾಡಿ ಆ ವಿಚಾರವನ್ನು ...

(ಗೊಂದಲ)

ಅಧ್ಯಕ್ಷರು : ಆಯಿತು ಬಿಡಿ. ಈಗ ಒಪ್ಪಿಕೊಂಡಿದ್ದಾರೆ. ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕಾಗಿದೆ.

ಅಧ್ಯಕ್ಷರು : ಮಾತನಾಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರು ಕರ್ನಾಟಕ ಮೌಲ್ಯವರ್ಧಿತ ತೆರಿಗೆ 2003ಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಇದಕ್ಕೆ ಅವರು ಏನು ವಿವರ ಕೊಡದೆ, ಬಜೆಟ್‌ನಲ್ಲಿ ಏನು ಹೇಳಿರತಕ್ಕಂಥದ್ದಕ್ಕೆ ಪೂರಕವಾಗಿ ನಾವು ತಿದ್ದುಪಡಿ ಮಾಡಿದ್ದೇವೆ ಎನ್ನತಕ್ಕಂಥಾದ್ದು ಹೇಳಿದ್ದಾರೆ. ಆದರೆ, ನಾಲ್ಕು ಪರ್ಸೆಂಟ್ ಮಾಡಿದ್ದು, ಹಿಂದೆ ಇದಕ್ಕೆ ಎಷ್ಟಿತ್ತು ಎನ್ನತಕ್ಕಂಥಾದ್ದನ್ನು ಅವರು ಹೇಳಿದ್ದಾರಾ? ಎಲ್ಲಿ ಹೇಳಿದರು? ಮತ್ತೆ ಕೆಲವು ಅಧಿಕಾರಿಗಳಿಗೆ ಅಧಿಕಾರಿಗಳನ್ನು ಕೊಡಬೇಕೆಂದು ಇದರಲ್ಲಿ ಹೇಳಿದ್ದೀರಿ. ಆದರೆ ಇದನ್ನು ಬಜೆಟ್ ಪುಸ್ತಕದ ಯಾವ ಪ್ಯಾರಾದಲ್ಲಿ ಹೇಳಿದ್ದೀರಿ? ಹೇಳಿ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಏನು ಚರ್ಚೆ ಮಾಡು ತ್ತಿದ್ದೀರೆಂಬುದು. ಗೊತ್ತಾಗುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ : ಚರ್ಚೆಯಲ್ಲ. ನಿಮ್ಮ ಬಜೆಟ್‌ನಲ್ಲಿ . .

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರೆ, ನೀವು ಹಣಕಾಸಿನ ಸಚಿವರಾಗಿ ಕೆಲಸ ಮಾಡಿರತಕ್ಕಂಥವರು.

ಶ್ರೀ ಸಿದ್ಧರಾಮಯ್ಯ : ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು. ನೀವು ಇದರ ಬಗ್ಗೆ ಏನೂ ವಿವರಣೆ ಕೊಟ್ಟಿಲ್ಲ. ಇದು ಸದನದ ಎಲ್ಲಾ ಮೆಂಬರ್ಸ್ ಗೊತ್ತಾಗಬೇಕಲ್ಲವೆ? ಈಗ ಏನು ತಿದ್ದುಪಡಿ ತಂದಿದ್ದೇವೆಂದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಬಜೆಟ್‌ನಲ್ಲಿ ಏನು ಹೇಳಲಾಗಿತ್ತೆಂದು ಮತ್ತು ಅದಕ್ಕೆ ಪೂರಕವಾಗಿ ನಾವು ಏನು ಹೇಳಿದ್ದೇವೆ ಎನ್ನತಕ್ಕಂಥಾದ್ದು ಗೊತ್ತಾಗಬೇಕಲ್ಲವೆ? ಜಾಯಿಂಟ್ ಕಮಿಷನರ್‌ರವರಿಗೆ ಅಧಿಕಾರ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಜಾಯಿಂಟ್ ಕಮಿಷನರ್‌ರವರಿಗೆ ಅಧಿಕಾರ ಕೊಡುತ್ತೇವೆಂದು ಹೇಳುತ್ತಿದ್ದೀರಿ? ಏತಕ್ಕಾಗಿ ಅಧಿಕಾರ ಕೊಡುತ್ತೇವೆ ಎನ್ನತಕ್ಕಂಥಾದ್ದನ್ನು ಹೇಳದೆ ಈ ಬಿಲ್‌ನ್ನು ಸುಮ್ಮನೆ ಒಪ್ಪಿಕೊಳ್ಳಬೇಕೆ? ಈ ರೀತಿಯಾಗಿ ಬುಲ್ಡೋಜ್ ಮಾಡುವುದಕ್ಕೆ ಆಗುವುದಿಲ್ಲ. ಕೊನೆ ಪಕ್ಷ ಆರ್ಥಿಕ ಮಂತ್ರಿಗಳು ಇದನ್ನು ಏತಕ್ಕಾಗಿ ತಂದಿದ್ದೇವೆ ಮತ್ತು ತಂದಿರತಕ್ಕಂಥ ಉದ್ದೇಶ ಏನು ಮತ್ತೆ ಬಜೆಟ್‌ನಲ್ಲಿ ನಾವು ಏನು ಹೇಳಿದ್ದೇವೆ ಮತ್ತು ಅದಕ್ಕೆ ಪೂರಕವಾಗಿ ಇದು ಅತ್ಯಂತ ಅಗತ್ಯವಾಗಿ ಈ ತಿದ್ದುಪಡಿ ಆಗಬೇಕು ಇಲ್ಲದಿದ್ದರೆ ಇಂಪ್ಲಿಮೆಂಟ್ ಮಾಡುವುದಕೆ 1ನೇ ತಾರೀಖಿನಿಂದ ಆಗುವುದಿಲ್ಲ, ಎನ್ನತಕ್ಕಂಥಾದ್ದರ ಬಗ್ಗೆ ವಿವರಣೆ ಕೊಡಬೇಕೋ ಅಥವಾ ಬೇಡವೊ? ಇದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಮತ್ತು ಇತರರು ಕೇಳುತ್ತಿದ್ದಾರೆ. ನಾನು ಆ ಸಂದರ್ಭದಲ್ಲಿ ಸುಮ್ಮನೆ ಕೇಳುತ್ತಾ ಕುಳಿತುಕೊಂಡಿದ್ದೆ. ನೀವು ಇದರಲ್ಲಿ ನಾಲ್ಕು ಪರ್ಸೆಂಟ್ ಮತ್ತು ಇತರೆ ಕೆಲವು ಐಟಂಗಳನ್ನು ನಮೂದು ಮಾಡಿದ್ದೀರಿ. ಮೊದಲು ಇದು ಎಷ್ಟು ಪರ್ಸೆಂಟ್ ಇತ್ತು. ಈಗ ಎಷ್ಟು ಪರ್ಸೆಂಟ್ ಆಗಿದೆ? ಎಂಪವರ್ಡ್ ಕಮಿಟಿಯಲ್ಲಿ ಇದನ್ನು ಚರ್ಚೆ ಮಾಡಿ ತೀರ್ಮಾನ ಮಾಡಿದ್ದಾರೆಯೆ? ಇವೆಲ್ಲವೂ ಇಲ್ಲದೆ ಇದನ್ನು ಜಾರಿ ಕೊಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನತಕ್ಕಂಥಾದ್ದರ ಬಗ್ಗೆ ಏನೂ ಹೇಳದೆ ಸುಮ್ಮನೆ ಇಷ್ಟೊಂದು ತಿದ್ದುಪಡಿ ತೆಗೆದುಕೊಂಡು ಬಂದಿದ್ದೇವೆ ಎಲ್ಲವನ್ನು ಒಪ್ಪಿಕೊಳ್ಳಿ ಎಂದರೆ ಹೇಗೆ? ದಿಸ್ ಈಸ್ ನಾಟ್ ಕರೆಕ್ಟ್. ಹೌಸನ್ನು ಈ ರೀತಿಯಾಗಿ ಬುಲ್ಡೋಜ್ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಅಧ್ಯಕ್ಷರಿಗೆ ಹೇಳುವುದೇನೆಂದರೆ ಅವರು ಇದರ ಬಗ್ಗೆ ಏನೂ ವಿವರಣೆಯನ್ನೇ ಕೊಟ್ಟಿಲ್ಲ. ಉದ್ದೇಶಗಳನ್ನೂ ಸಹ ಹೇಳಿಲ್ಲ, ಇದಕ್ಕೆಲ್ಲಾ ಅವರು ಹೇಳಬೇಕೋ ಬೇಡವೋ?

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಏನಾದರೂ ಇದ್ದರೆ ಹೇಳಿ ಎಂದು ನಾನು ಈಗಾಗಲೇ ಹೇಳಿದ್ದೇನೆ. ಈಗ ಏನಾಗಿದೆಂದರೆ, ಬಜೆಟ್ ಪ್ರೊಪೋಜಲ್ ಏನಿದೆ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಈ ಒಂದು ವಿಧೇಯಕಗಳನ್ನು ತಂದಿದ್ದಾರೆ. ಇದೂ ಕೂಡ ಪಾರ್ಟ್ ಆಫ್ ದಿ ಬಜೆಟ್. ಅದಕ್ಕೋಸ್ಕರ ಇದು ಪಾಸ್ ಆಗಲೇಬೇಕಾಗಿದೆ. ಏನಾದರೂ ಇದ್ದರೆ ಹೇಳಿ ಎಂದು ನಾನು ಹೇಳಿದ್ದೇನೆ. ಮತ್ತೇನು ನಾನು ಹೇಳುವುದಕ್ಕೆ ಆಗುತ್ತದೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮಗೆ ಮಾಹಿತಿ ಬೇಕಲ್ಲವೆ? ಈ 23 ಐಟಂಗಳು ಸೇರಿರತಕ್ಕಂಥಾದ್ದಕ್ಕೆ ಮಾಹಿತಿ ಬೇಡವೇ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಎಂ.ಪಿ.ಪ್ರಕಾಶ್‌ರವರೆ, ತಾವು ಉತ್ತರ ಕೊಡುವುದಕ್ಕೆ ಹೋಗಬೇಡಿ. ಮಾನ್ಯ ಯಡಿಯೂರಪ್ಪನವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಆಯವ್ಯಯ ಪತ್ರದಲ್ಲಿ ಮಾಡಿರತಕ್ಕಂಥ ಪ್ರಸ್ತಾವನೆಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟಂಥ ವಿಷಯಗಳಿಗೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ, ದಯಮಾಡಿ . . .

(ಗೊಂದಲ)

Sri. Siddaramaiah : I dont't know whether prakash is a Member of the Cabinet. ಹಣ ಕಾಸಿನ ಸಚಿವರು ಯಾರು? he has the responsibility. Let him reply.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಪ್ರಕಾಶ್‌ರವರು ಹಣಕಾಸಿನ ಇಲಾಖೆಯ ಸಚಿವರಲ್ಲ. ಇದಕ್ಕೆ ಹಣಕಾಸಿನ ಸಚಿವರೇ ಉತ್ತರ ಕೊಡಬೇಕಾಗುತ್ತದೆ. How can Prakash speak on Finance Bill? Are you also part of this Bill?

(ಗೊಂದಲ)

ಶ್ರೀ. ಜೆ.ಸಿ. ಮಾಧುಸ್ವಾಮಿ : ಒಬ್ಬ ಮೆಂಬರ್ ಇದರ ಬಗ್ಗೆ ಹೇಗೆ ಉತ್ತರ ಹೇಳುವುದಕ್ಕೆ ಆಗುತ್ತದೆ? ತಾವು ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡುತ್ತಿದ್ದೀರಾ?

ಶ್ರೀ ಎಂ.ಪಿ.ಪ್ರಕಾಶ್ : ಇದು ಕ್ಯಾಬಿನೆಟ್ ಪ್ರಶ್ನೆ ಅಲ್ಲ. ಈಗಾಗಲೇ ಬಜೆಟ್‌ನ್ನು ಅನುಮೋದಿಸಿದ್ದೇವೆ. ಆದ್ದರಿಂದ . .

(ಗೊಂದಲ)

ಅಧ್ಯಕ್ಷರು : ಆಯಿತು. ಗಲಾಟೆ ಮಾಡಿಕೊಳ್ಳಬೇಡಿ. ಈಗ ಏನು ಹೇಳಬೇಕೋ ಅದನ್ನು ಹೇಳಿದ್ದಾರೆ. ಕೆಲವು ಪ್ರಶ್ನೆಗಳಿಗೆ ಅವರಿಗೆ ಗೊತ್ತಿಲ್ಲದೆ ಇರತಕ್ಕಂಥ ಕ್ಲಾರಿಫಿಕೇಶನ್ ಹೇಳಬಾರದೆಂದು ಎಲ್ಲಿದೆ?

(ಗೊಂದಲ)

ಶ್ರೀ ಜೆ.ಸಿ. ಮಾದುಸ್ವಾಮಿ : ಅವರು ಅಫಿಷಿಯಲ್ ಬಿಲ್ ಮೇಲೆ ಉತ್ತರ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ ಕೇಳೋಣ. ಮಾನ್ಯ ಪ್ರಕಾಶ್‌ರವರೆ, ಸಭಾನಾಯಕರು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಬಜೆಟ್ ಪುಸ್ತಕ ಪೇಜ್ ನಂ.111 ರಲ್ಲಿರುವ ಪ್ಯಾರಾ 213. ಅಂದರೆ ಬಜೆಟ್ ಪುಸ್ತಕದಲ್ಲಿರತಕ್ಕಂಥಾದ್ದನ್ನು ಸನ್ಮಾನ್ಯ ಹಣಕಾಸಿನ ಸಚಿವರು ಏನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ, Empowering the

commissioner to authorize officers to file appeal before the Appellate Tribunal.- - - ಈ ರೀತಿಯಾಗಿ ಕೆಲವು ಅಂಶಗಳನ್ನು ನಾವು ಬಜೆಟ್ ಪುಸ್ತಕದಲ್ಲಿ ಮಂಡನೆ ಮಾಡಿದ್ದೇವೆ. ಈ ವಿಷಯಗಳ ಬಗ್ಗೆಯೇ ಅವರು ಈ ಒಂದು ಪ್ರಸ್ತಾವನೆಯನ್ನು ಇಲ್ಲಿಟ್ಟಿದ್ದಾರೆ. ಮತ್ತು ಇವತ್ತು ಈ ವಿಧೇಯಕ ಮಂಡನೆ ಮಾಡಿರತಕ್ಕಂಥದ್ದು. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರತಕ್ಕಂಥಾದ್ದು. ಮಾನ್ಯ ಸಿದ್ದರಾಮಣ್ಣನವರೂ ಕೂಡ 7 ಅವಧಿಯಲ್ಲಿ ಬಜೆಟನ್ನು ಮಂಡನೆ ಮಾಡಿದ್ದಾರೆ. ಬಜೆಟನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಕೆಲವು ವಿಧೇಯಕಗಳನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಈ ಸದನದಲ್ಲಿ ನಡೆದುಕೊಂಡು ಬಂದಿದೆ. ಈಗಲೂ ಕೂಡ ಅದೇ ರೀತಿಯಾಗಿ ಮಾಡಲಾಗಿದೆ. ಈಗಾಗಲೇ ಬಜೆಟ್‌ನಲ್ಲಿ ಈ ವಿಷಯಗಳನ್ನು ತಂದಿದ್ದೇವೆ. ಆದ್ದರಿಂದ ಬಜೆಟನ್ನು ಈ ಸದನ ಅಪ್ರೂವ್ ಮಾಡಿದೆ. ಅದಕ್ಕೆ ಸಂಬಂಧಪಟ್ಟಂತೆ ಈ ತಿದ್ದುಪಡಿಯನ್ನು ತಂದಿರತಕ್ಕಂಥಾದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ : ನನಗೆ ಒಂದು ಅರ್ಥವಾಗಬೇಕು. ನಾನು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಅದಕ್ಕೆ ನಾವು ಹೊಣೆಗಾರರು ಅಲ್ಲ. ಇದು ಒಂದು ಬಿಲ್.

ಅಧ್ಯಕ್ಷರು : ಏನಾದರೂ ಡೌಟ್ಸ್‌ಗಳು ಇದ್ದರೆ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವುಗಳು ತವಲಿಗೆ, ತೀಟೆಗೆ ಮಾತನಾಡುವುದಕ್ಕಾಗುವುದಿಲ್ಲ. ಇಲ್ಲಿ ಏನು ಪ್ರಸ್ತಾಪವಾಗಿದೆ. ಇದರ ಬಗ್ಗೆ ಡಿಟೇಲ್ ಆಗಿ ಬಜೆಟ್‌ನಲ್ಲಿ ಗೊತ್ತಿಲ್ಲ. ಇದರಲ್ಲಿ ನಮಗೆ ಹೇಳಲಿಲ್ಲ. ಈ ಬಿಲ್ಲನ್ನು ಅದು ಆದ ತಕ್ಷಣ ಇಂಟ್ರಡ್ಯೂಸ್ ಮಾಡಿ ಪಾಸು ಮಾಡಿಕೊಳ್ಳಬೇಕಾಗಿತ್ತು. ಈಗ ನಾನು ಕೇಳುತ್ತಿದ್ದೇನೆ. ಕಾಮಗಾರಿಗಳ ಕರಾರಿನ ವಿವರಣೆ ಪ್ರಕರಣ–1 4(1)(ಸಿ)ಗೆ ಅಮೆಂಡ್‌ಮೆಂಟ್ ಮಾಡಿ ಶೇಕಡಾ 4 ಎಂದು ಹೇಳುತ್ತಿದ್ದೀರಿ. What was the prevailing price? ಮೊದಲು ಏನಿತ್ತು? ಏತಕ್ಕಾಗಿ ಇದನ್ನು ಇಲ್ಲಿಗೆ ತರುವಂತಹ ಪರಿಸ್ಥಿತಿ ಉದ್ಭವವಾಯಿತು? ಇದು ನಮಗೆ ಗೊತ್ತಾಗಬೇಕಲ್ಲವೇ? 23 ಐಟಂಗಳಿಗೆ 4 ಪರ್ಸೆಂಟ್ ಟ್ಯಾಕ್ಸ್ ಆಗುತ್ತದೆಂದು ಹೇಳಿದ್ದೀರಿ. ಅವುಗಳು ನಮಗೆ ಗೊತ್ತಿಲ್ಲವಲ್ಲಾ? ಏಕೆ ಮೊದಲು ಅದಕ್ಕೆ ಎಷ್ಟು ಪರ್ಸೆಂಟ್ ಇತ್ತು. ಅದು ಮೇಲಿನಿಂದ ಕೆಳಗೆ ಬಂತೇ? ಕೆಳಗಿನಿಂದ ಮೇಲಕ್ಕೆ ಹೋಯಿತಾ, ಇದನ್ನು ಹಣಕಾಸಿನ ಮಂತ್ರಿಗಳಾದವರು ಹೇಳಬೇಕಲ್ಲವೇ? ಆಮೇಲೆ ಕೆಲವು ಅಧಿಕಾರಿಗಳದ್ದು ಎಂಪವರ್‌ಮೆಂಟ್, ಅವರಿಗೆ ಇದ್ದ ಅಧಿಕಾರವನ್ನು ಶಿಫ್ಟ್ ಮಾಡಿದ್ದೀರಿ. ಜಾಸ್ತಿ ಅಧಿಕಾರವನ್ನು ಕೊಟಿದ್ದೀರಿ, ಇವೆಲ್ಲವನ್ನೂ ಹೇಳಬೇಕು. ಕೆಲವು ಆವರಣಗಳನ್ನು ಫಿಕ್ಸ್ ಮಾಡುತ್ತಿದ್ದೀರಿ. ಇದನ್ನು ನೀವು ಹೇಳಬೇಕಲ್ಲವೇ? ಈಗ ನಾನು ಒಂದು ಮಾತನ್ನು ಹೇಳುತ್ತೇನೆ. 'ಜಲ್ಲಿ ಕಲ್ಲುಗಳು' ಎಂಬ ಪದಗಳಿಗೆ 'ಗ್ರಾನೈಟ್ಸ್, ಅಥವಾ ಇತರ ಯಾವುದೇ ಜಲ್ಲಿಕಲ್ಲುಗಳನ್ನು ಪ್ರಯೋಜಿಸತಕ್ಕದ್ದು' ಎಂದು ಹೇಳುತ್ತೀರಿ. ನನಗೆ ಇದನ್ನು ಏತಕ್ಕಾಗಿ ತಂದಿದ್ದೀರಿ ಎಂದು ಗೊತ್ತಾಗಬೇಕಲ್ಲ?

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ನಾನು ನನ್ನ ಆಯವ್ಯಯದ ಭಾಷಣದಲ್ಲಿ ಈ ಪ್ಯಾರಾನಂ : 207ರಿಂದ 221ರವರೆಗೆ ಯಾವ್ಯಾವ ಸುಧಾರಣಾ ಕ್ರಮವನ್ನೂ ಇನ್‌ಕಾರ್ಪೊರೇಟ್ ಮಾಡಬೇಕು ಎಂದು ಅದನ್ನು ನಾನು ಹೇಳಿದ್ದೇನೆ. ಅದೇ ಸಂಗತಿಗಳನ್ನು ಇಲ್ಲಿ ಮಂಜೂರು ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡಿದ್ದೇನೆ. 1–4–2007ರಿಂದ ಅದು ಜಾರಿಗೆ ಬರಬೇಕಾಗಿದೆ. ಅದೇ ಬಿಲ್ಲನ್ನು ಇಲ್ಲಿಗೆ ತೆಗೆದಿಟ್ಟಿರುವುದು. ಬಹಳ ಸ್ಪಷ್ಟವಾಗಿ ಪ್ಯಾರಾ 207 ರಿಂದ 221ರವರೆಗೆ ಏನೇನು ಪ್ರಸ್ತಾಪ ಮಾಡಿದ್ದೇನೆ ಅದನ್ನು ಬಿಟ್ಟು ಇನ್ಯಾವುದೂ ಇಲ್ಲ. ನಾವು ಹೊಸದಾಗಿ ಇದರಲ್ಲಿ ಏನೂ ಸೇರಿಸಿರುವುದಿಲ್ಲ. ಆ ಸುಧಾರಣಾ ಕಾರ್ಯಕ್ರಮಗಳನ್ನು ಹೇಳಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ತಾವು 74ನೇ ಪೇಜ್‌ನಲ್ಲಿ 13 ಐಟಂಗಳನ್ನು ಇಟ್ಟಿದ್ದೀರಿ. ಇದನ್ನು ದಯವಿಟ್ಟು ಕೇಳಬೇಕು. 13 ಐಟಂ ಬಜೆಟ್‌ನಲ್ಲಿಟ್ಟಿದ್ದೀರಿ. ಇಲ್ಲಿ 23 ಐಟಂಗಳನ್ನು ಸೇರಿಸಿದ್ದೀರಿ. 13 ಐಟಂನ್ನು ಬಜೆಟ್‌ನಲ್ಲಿಟ್ಟು ಅದು ಬೇರೆ ಇದು ಬೇರೆ ಇಟ್ಟು ಇದು ಪಾರ್ಟ್ ಆಫ್ ದಿ ಫೈನಾನ್ಸ್ ಬಿಲ್ ಎಂದು ಹೇಳಿದರೆ ಹೇಗೆ ಆಗುತ್ತದೆ. ನೀವು ಇದನ್ನು ಓದಿನೋಡಿ. ಬಜೆಟ್‌ನಲ್ಲಿ 13 ಐಟಂನ್ನು ಇಟ್ಟಿದ್ದೀರಿ. ಅದಕ್ಕೂ ಮತ್ತು ನೀವು ಇಲ್ಲಿ ಇಟ್ಟಿರುವ 23 ಐಟಂಸ್‌ಗೂ ಎಷ್ಟು ವ್ಯತ್ಯಾಸ ಇದೆ ಎನ್ನುವುದನ್ನು ದಯವಿಟ್ಟು ನೋಡಿ. ಇದು ಒಂದನೆಯದು, 63(ಎ)ನಲ್ಲಿ ಹೊಸ ಪ್ರಕರಣ ಸೇರ್ಪಡೆಯಲ್ಲಿ ಆಯುಕ್ತರ ಅಧಿಕಾರವನ್ನು ಬದಲಾವಣೆ ಮಾಡುತ್ತಿದ್ದೀರಿ. ಇದು ಒಂದು ಕಾನೂನಿನ ಪ್ರಶ್ನೆ. ಮಾನ್ಯ ಸಿದ್ದರಾಮಯ್ಯನವರೆ, ಆಯುಕ್ತರ ಅಧಿಕಾರವನ್ನು ಬದಲಾವಣೆ ಮಾಡುವುದು ಕಾನೂನಿನ ಪ್ರಶ್ನೆ ತಾನೇ? ಬದಲಾವಣೆ ಮಾಡುವ ಹಕ್ಕು ಏನಿದೆ ಇದನ್ನು ತಿದ್ದುಪಡಿ ಮಾಡಬೇಕಲ್ಲಾ? ಹೊಸ ಆಯುಕ್ತರು ಎಂದು ಹೇಗೆ ಸೇರಿಸುತ್ತೀರಿ ಇದರಲ್ಲಿ ಕಾನೂನಿಗೆ ಸಂಬಂಧಪಟ್ಟ ಆಯುಕ್ತರ ಅಧಿಕಾರವನ್ನು ನೀವು ಬದಲಾವಣೆ ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಬಜೆಟ್‌ನಲ್ಲಿರುವುದನ್ನು ಬಿಟ್ಟು ಇನ್ಯಾವುದನ್ನೂ ನಾವು ಸೇರಿಸಿಲ್ಲ. ದಯಮಾಡಿ ತಾವು ಕೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏತಕ್ಕೆ ಮಾಡುತ್ತಿದ್ದೀರಿ ಎಂದು ನೀವು ವಿವರಣೆ ನೀಡಬೇಕು. ಯಾವ ಕಾರಣಕ್ಕೋಸ್ಕರ ಬದಲಾವಣೆ ಮಾಡುತ್ತೇವೆಂದು ಎಕ್ಸ್‌ಪ್ಲೇನ್ ಮಾಡಿ. ನೀವು ಸದನಕ್ಕೆ ಎಕ್ಸ್‌ಪ್ಲೇನ್ ಮಾಡಿ.

ಶ್ರೀ ಎಂ.ಪಿ. ವೆಂಕಟೇಶ್: ಈ ಸದನದ ಹಿರಿಯ ಸದಸ್ಯರು ಮಾತನಾಡಿದರೆ ಎಕ್ಸ್‌ಪ್ಲೇನ್ ಮಾಡಿದರೆ ಅವರು ಬೇಡ ಇವರು ಬೇಡವೆಂದು ಹೇಳುತ್ತೀರಿ. ಈಗ ನೋಡಿದರೆ ಹೇಳಿ ಹೇಳಿ ಎಂದು ಹೇಳುತ್ತೀರಿ. ನಿಮ್ಮಷ್ಟು ಹಕ್ಕು ಬೇರೆಯವರಿಗೆ ಇಲ್ಲವೇನು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸುಮ್ಮನೆ ಕುಳಿತುಕೊಳ್ಳಿ. ನೀವು ಸದನಕ್ಕೆ ಎಕ್ಸ್‌ಪ್ಲೇನ್ ಮಾಡಿ.

ಶ್ರೀ ಕೆ. ವೆಂಕಟೇಶ್: ಮಾನ್ಯ ಎಂ.ಪಿ.ಪ್ರಕಾಶ್‌ರವರು ಮಾತನಾಡುವಾಗ ನೀವು ಬೇಡವೆಂದು ಹೇಳುತ್ತೀರಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದರಲ್ಲಿ 13 ಐಟಂನ್ನು ಇಟ್ಟುಬಿಟ್ಟು ಇದರಲ್ಲಿ 23 ಐಟಂ ಇಟ್ಟಿರುವ ಬಗ್ಗೆ ಹೇಳಬೇಕು.

ಶ್ರೀ ಎಂ.ಪಿ.ವೆಂಕಟೇಶ್ : ಅವರು ಬೇಡ ಇವರು ಬೇಡವೆಂದು ಹೇಳುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ನೀವೇ ಹೇಳಿ

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಸಿ.ಎಂ.ರವರು ಏನು ಹೇಳುತ್ತಾರೆ ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು) : ಈಗ ಟ್ಯಾಕ್ಸ್‌ಲಿಸ್ಟ್‌ನಲ್ಲಿ

ಅಧ್ಯಕ್ಷರು : ಏನಾದರೂ ಅನುಮಾನಗಳು ಇದ್ದರೆ ಕೇಳಿ. ಇದು ಬಜೆಟ್ ಪಾಸಾಗಬೇಕು, ವಿಧೇಯಕಗಳೆಲ್ಲವೂ ಪಾಸ್ ಆಗಬೇಕು. ಈ ತರಹ ನೀವು ಮಾಡಿದರೆ ಹೇಗೆ?

ಶ್ರೀ ಜೆ.ಸಿ.ಮಾಧುಸ್ವಾಮಿ : ಬಿಲ್ಲನ್ನು ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರು ಎಕ್ಸ್‌ಪ್ಲೇನ್ ಮಾಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಮಾಧುಸ್ವಾಮಿಯವರೆ. ನಾನು ಹೇಳುವುದನ್ನು ಕೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳೇ, ತಾವು ಒಂದು ನಿಮಿಷ ಯೀಲ್ಡ್ ಆಗಿ. ಈ ಬಿಲ್ ಕಂಟೆಂಟ್‌ನ್ನು ಅವರು ಎಕ್ಸ್‌ಪ್ಲೇನ್ ಮಾಡಬೇಕು. ಇಂತಿಂಥ ಕಡೆ ನಾನು ಅಮೆಂಡ್ ಮಾಡಿದ್ದೇನೆ, ಈ ಕಾರಣಕ್ಕಾಗಿ ಮಾಡಿದ್ದೇನೆ. ಎಂದು ಹೇಳಲಿ ಕನ್‌ವೀನ್ಸ್ ಆದರೆ, ನಾವು ಒಪ್ಪಿಕೊಳ್ಳುತ್ತೇವೆ. ಕೇಳುವುದು ಏನಾದರೂ ಇದ್ದರೆ ಅದನ್ನು ಕೇಳುತ್ತೇವೆ. ಬಿಲ್ಲನ್ನು ಎಕ್ಸ್‌ಪ್ಲೇನ್ ಮಾಡದೆ ನೀವು ಪರ್ಯಾಲೋಚನೆ ಆಗಿದೆ ಎಂದು ಭಾವಿಸತಕ್ಕದ್ದು ಎಂದೇನಿದೆ ಅದಕ್ಕೆ ನಾವು ಅಡ್ಡಿ ಮಾಡಿದ್ದೇವೆ. ಅವರು ನಿಂತುಕೊಂಡು ಎಕ್ಸ್‌ಪ್ಲೇನ್ ಮಾಡುವುದಕ್ಕೆ ಹೇಳಬೇಕು. ಇಂತಿಂತಹ ಕಡೆ ಇಂತಿಂಥ ಕಾರಣಕ್ಕಾಗಿ ನಾನು ಅಮೆಂಡ್‌ಮೆಂಟ್ ತಂದಿದ್ದೇನೆ. ದಯವಿಟ್ಟು ಪಾಸು ಮಾಡಿಕೊಡಿ ಎಂದು ಅವರು ಕೇಳಬೇಕಲ್ಲವೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಮಗೂ ಎಲ್ಲಾ ವಿಷಯ ಗೊತ್ತಿದೆ ಎಂದು ನಾವು ಭಾವಿಸುತ್ತಿಲ್ಲ. ಅವರೂ ಕೂಡ ಭಾವಿಸಬಾರದು. ನಮಗೆ ವಿಷಯ ಗೊತ್ತಿಲ್ಲ. ಅದನ್ನು ಏನು ಎಂದು ಹೇಳಿದರೆ ಅದರ ಬಗ್ಗೆ ನಮಗೆ ಕನ್‌ವೀನ್ಸ್ ಆಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಪ್ಯಾರಾ ನಂ:211 ಪೇಜ್ ನಂ: 89ರಲ್ಲಿ I also propose to reduce tax to 4% from 12.5% on (1) poha of maize, (2) spent and cut dry chillies, and dry chilly seeds, (3) handmade soap, (4) surgical gloves, (5) all compact disks, (6) cold tar, (7) certain test and measuring equipments and (8) Biological Control Agents (9) packing material with lining. - -

ಈ ರೀತಿಯಾಗಿ 10 ಮೆಟೀರಿಯಲ್ಸ್ ಏನು ಇದೆ, ಇದರಲ್ಲಿ 12 ಪರ್ಸೆಂಟ್ ಇದ್ದುದ್ದನ್ನೂ 4 ಪರ್ಸೆಂಟ್‌ಗೆ ಇಳಿಸುತ್ತಿರುವುದು. ಅದಕ್ಕೆ ತಿದ್ದುಪಡಿಯನ್ನು ತಂದಿರುವಂತಹದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಇದಕ್ಕೂ ಮತ್ತು ಅದಕ್ಕೂ ಸಂಬಂಧವಿಲ್ಲ. ತಾವು ಈ ಪೇಜನ್ನು ಓದಬೇಕು. 19ನೇ ಪೇಜ್‌ನಲ್ಲಿ ಕೊಟ್ಟಿರುವಂತಹ ಐಟಮ್ಸ್ ಬೇರೆ, ನೀವು ಬಜೆಟ್‌ನಲ್ಲಿ ಹೇಳುತ್ತಿರುವಂತಹ ಐಟಮ್ಸ್ ಬೇರೆಯಾಗಿದೆ. ಅದನ್ನು ನಾವು ಕೇಳುತ್ತಿರುವುದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಈ ಒಂದು ಪೇಜ್‌ನಲ್ಲಿ ಆ ಒಂದು ಕಾಂಪೊನೆಂಟ್‌ಗಳು ಏನಿದೆ..

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : 13 ಐಟಮ್‌ಗಳ ಬಗ್ಗೆ ಹೇಳಿದ್ದೀರಿ, ಎಲ್ಲಿದೆ 13 ಐಟಂಗಳು?

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ದಯಮಾಡಿ ಕೇಳಬೇಕು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ವಿವರವಾಗಿ ಏನೂ ಇಲ್ಲ. ಈಗ ಪೇಜ್ ನಂ: 89ರಲ್ಲಿ ಏನು ಕೊಟ್ಟಿದ್ದಾರೆ, ಅದರಲ್ಲಿ ವಿವರವಾಗಿ ಇಲ್ಲದೇ ಇರುವುದನ್ನು ಇಲ್ಲಿ ವಿವರವಾಗಿ ಇಟ್ಟಿರತಕ್ಕಂಥಾದ್ದು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಅವರಿಗೆ ಏನು ಅನುಮಾನಗಳಿವೆ, ಅದನ್ನು ಕೇಳಲಿ ಬಿಡಿ.

ಶ್ರೀ ಜಿ.ಎಸ್.ಶ್ರೀರಾಮರೆಡ್ಡಿ : ಪೇಜ್ ನಂ : 89ರಲ್ಲಿ ಇಲ್ಲಿ ಐಟಂಸ್‌ಗಳನ್ನು ಮೆನ್‌ಷನ್ ಮಾಡಿದ್ದೀರಿ. ಇಲ್ಲಿ ಮೆನ್‌ಷನ್ ಮಾಡಿರುವಂತಹ ಐಟಂಸ್, ಬಜೆಟ್ ಪೇಪರ್‌ನಲ್ಲಿ ಮತ್ತೆ ಇಲ್ಲಿ ಪೇಜ್ ನಂ: 19ರಲ್ಲಿ ಮೆನ್‌ಷನ್ ಮಾಡಿರುವಂತಹ ಐಟಂಸ್ ಬೇರೆ ಬೇರೆಯೋ ಅಥವಾ ಒಂದೇನಾ ಎಂದು ಹೇಳಿಬಿಡಿ ಸಾಕು. ಅಷ್ಟೇ ಸಾಕು ನಮಗೆ, ಸುಮ್ಮನೆ ತಕರಾರು ಬೇಡ. 19ನೇ ಪೇಜ್‌ನಲ್ಲಿ ಬಿಲ್‌ನಲ್ಲಿ ಕೊಟ್ಟಿರುವಂತಹ ಐಟಂಸ್, ನೀವು 89ನೇ ಪೇಜ್‌ನಲ್ಲಿ ಏನೇನು ಐಟಂಸ್‌ಗಳನ್ನು ಕೊಟ್ಟಿದ್ದೀರಿ, ಬಜೆಟ್‌ನಲ್ಲಿ, ಈ ಎರಡು ಒಂದೇನಾ ಅಥವಾ ಬೇರೆ ಇದೆಯಾ? ಬೇರೆ ಇದ್ದರೆ ನೀವು ಎಕ್ಸ್‌ಪ್ಲೇನ್ ಮಾಡಲೇಬೇಕಾಗುತ್ತದೆ. ಸೇಮ್ ಇದ್ದರೆ ಬೇಕಾಗಿಲ್ಲ. ಇಲ್ಲದಿದ್ದರೆ ಬಿಲ್ ಎಕ್ಸ್‌ಪ್ಲೇನ್ ಮಾಡಲೇಬೇಕಲ್ಲಾ ನೀವು? ಬಿಲ್ ಎಕ್ಸ್‌ಪ್ಲೇನ್ ಮಾಡಿ ಎಂದರೆ ಸಿಟ್ಟುಮಾಡಿಕೊಂಡರೆ ಸದನ ಏತಕ್ಕಾಗಿ ನಡೆಯಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು 19ನೇ ಪೇಜ್‌ನಲ್ಲಿ ಏನು ಹೇಳಿದ್ದೇವೆ. ಅದನ್ನು ಬಿಟ್ಟು ಬೇರ್ಯಾವುದನ್ನೂ ಸೇರಿಸಿಲ್ಲ.

ಶ್ರೀ ಜಿ.ಎಸ್. ಶ್ರೀರಾಮರೆಡ್ಡಿ : ನೋಡಿ ಸಾರ್, ನೀವೇ ಬಜೆಟನ್ನು ಓದಿನೋಡಿ. ನಿಮ್ಮ ಬಜೆಟ್‌ನಲ್ಲಿ 89ನೇ ಪೇಜ್ ತೆಗೆದುಕೊಡಿ. ಇಲ್ಲಿ ಯಾವ ಐಟ್ಸಂ ಇದೆ, ಅಲ್ಲಿ ಯಾವ ಐಟ್ಸಂ ಇದೆ ನೋಡಿ. 89ನೇ ಪೇಜ್ ಸೆಕೆಂಡ್ ಪ್ಯಾರಾದಲ್ಲಿ ಪ್ರಾರಂಭವಾಗುತ್ತದೆ. ಅದು ಇದು ಒಂದೇನಾ?

Sri S. RAJENDRAN : Page 89.210(1) paddy, rice, wheat, pulses, flour and soji of rice and wheat, and maida, ಇದರಲ್ಲಿ ಏನು ಕೊಟ್ಟಿದ್ದೀರಿ.

ಶ್ರೀ ಜಿ.ಎಸ್. ಶ್ರೀರಾಮರೆಡ್ಡಿ : ಇದರಲ್ಲಿ ಬೇರೆ ಇದೆ, ಅದರಲ್ಲಿ ಬೇರೆ ಇದೆ. ಬಿಲ್‌ನ್ನು ಪಾಸು ಮಾಡಿದರೆ ನಾಳೆ ಯಾರಾದರೂ ಕೋರ್ಟಿಗೆ ಹೋದರೆ, ನಾವುಗಳೆಲ್ಲರೂ ಶಾಸನಸಭೆಯಲ್ಲಿರುವವರು ಎಂಎಲ್‌ಎಗಳ ಬೆಲೆ ಏನಾಗಬೇಕು? ಇದಕ್ಕೆ ಯಾರು ಉತ್ತರವನ್ನು ಕೊಡುತ್ತಾರೆ?

ಶ್ರೀ ಎಸ್. ರಾಜೇಂದ್ರನ್ : ಇದರಲ್ಲಿರುವುದನ್ನು ಓದಿಬಿಡಲಾ? ಎರಡರಲ್ಲೂ ಡಿಫರೆನ್ಸ್ ಇದೆ.

ಶ್ರೀ ಜಿ.ಎಸ್. ಶ್ರೀರಾಮರೆಡ್ಡಿ : ನಾಳೆಯಾದರೂ ಬಿಲ್‌ನ್ನು ತನ್ನಿ. ಈಗಲೇ ಆಗಬೇಕೆಂದು ಏನೂ ಇಲ್ಲವಲ್ಲಾ?

ಶ್ರೀ ಸಿದ್ದರಾಮಯ್ಯ : ಅಧಿಕಾರಿಗಳ ಜೊತೆಯಲ್ಲಿ ಇದರ ಬಗ್ಗೆ ಚರ್ಚೆಯನ್ನೂ ಮಾಡಿಲ್ಲ, ಮೂವ್ ಮಾಡಿದ್ದಾರೆ ಬಂದು ಬಿಟ್ಟಿದ್ದಾರೆ. ಪಾಪ, ಅವರಿಗೆ ಗೊತ್ತಿಲ್ಲ.

ಶ್ರೀ ಜಿ.ಎಸ್. ಶ್ರೀರಾಮರೆಡ್ಡಿ : ತಾವು ಅರ್ಥವನ್ನು ಮಾಡಿಕೊಳ್ಳಿ. ಇದನ್ನೂ ಸೋಮವಾರ ತನ್ನಿ, ಇದಕ್ಕೆ ಏನೂ ಅರ್ಜೆಂಟ್ ಇಲ್ಲ.

ಶ್ರೀ ಎಸ್. ರಾಜೇಂದ್ರನ್ : ಅಧಿಕಾರಿಗಳು ಸರಿಯಾಗಿ ಹೇಳಿದರೆ ಪರವಾಗಿಲ್ಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ತಯಾರಾಗಿ ಬರದೆ ನಮ್ಮನ್ನೆಲ್ಲಾ ಬಾಯಿ ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಿದರೆ ಹೇಗೆ? ಇದು ಶಾಸನ ಸಭೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಇದು ಇಡೀ ಸದನದಲ್ಲಿ ಹೊಸ ಬೆಳವಣಿಗೆಗಳನ್ನು ಮಾಡುವುದಕ್ಕೆ ಹೊರಟಿರುವುದು. ಪ್ರತಿ ಸಂದರ್ಭದಲ್ಲಿ ಬಜೆಟ್‌ನಲ್ಲಿ ಒಂದು ಸಲ ಅಪ್ರೂವ್ ಆದಮೇಲೆ ಏನು ಕೆಲವು ವಿಧೇಯಕಗಳನ್ನು ಮಂಡನೆ ಮಾಡಿದಾಗ ಪ್ರತಿ ಸಂದರ್ಭದಲ್ಲಿ ಈ ರೀತಿಯಾಗಿ ಯಾರೂ ಪ್ರಶ್ನೆಯನ್ನು ಮಾಡಿರಲಿಲ್ಲ. ಈಗ ಹೊಸದಾಗಿ ಈ ಸದನದಲ್ಲಿ ಪ್ರಾರಂಭ ಮಾಡಿರುವುದು ಮೊದಲನೆಯ ಬಾರಿ. ಇದರ ಬಗ್ಗೆ ಹಿಂದೆ ಯಾವ ರೀತಿಯಾಗಿಯೂ ಚರ್ಚೆಯನ್ನು ಮಾಡಿರುವುದಿಲ್ಲ. ಮಾನ್ಯ ಸಿದ್ದರಾಮಣ್ಣನವರು 7 ಸಲ ಬಜೆಟ್‌ನ್ನು ಮಂಡನೆ ಮಾಡಿದ್ದರಲ್ಲಾ, ಈ ರೀತಿಯಾಗಿ ಮತ್ತೆ ಚರ್ಚೆಯನ್ನು ಮಾಡಿದ್ದೀರಾ? ಚರ್ಚೆ ಮಾಡಿದ್ದರೆ ಅದರ ಬಗ್ಗೆ ಕಡತವನ್ನು ತೆಗೆಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಸಿದ್ದರಾಮಯ್ಯನವರು, ಷೆಡ್ಯೂಲ್ ಚೇಂಜ್ ಮಾಡಿ ಬಿಲ್ ಇಟ್ಟಿದ್ದಾಗ ನಾವು ಪ್ರಶ್ನೆ ಮಾಡಿದ್ದೇವೆ. ನಾನೇ ಮಾಡಿದ್ದೇನೆ. 'ಸಿದ್ದರಾಮಯ್ಯನವರೇ, ಇದು ಕಣ್ಣು ಒರೆಸುವಂತಹ ಕೆಲಸವನ್ನು ಮಾಡಬೇಡಿ, ಈಗಿರುವ ಟ್ಯಾಕ್ಸ್ ಎಷ್ಟು? ನೀವು ಷೆಡ್ಯೂಲ್ ಚೇಂಜ್ ಮಾಡಿ ಹಾಕಿರುವಂತಹ ಟ್ಯಾಕ್ಸ್ ಎಷ್ಟು? ಇಷ್ಟೊಂದು ಐಟಂನ್ನು ಷೆಡ್ಯೂಲ್ ಚೇಂಜ್ ಮಾಡಿ ನಮ್ಮ ಮುಂದೆ ಹೇಳುತ್ತಿದ್ದೀರಿ. ವ್ಯಾಟ್‌ನಲ್ಲಿ ಷೆಡ್ಯೂಲನ್ನೂ ಚೇಂಜ್ ಮಾಡಿದರೆ ಟ್ಯಾಕ್ಸ್ ಜಾಸ್ತಿಯಾಗುತ್ತದೆ ಎಂದು ನಮಗೆ ಅರಿವು ಇದೆ. ಎಂದು ಅವತ್ತು ನಾನು ಕೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇ, ತಾವು ರೇಕಾರ್ಡ್‌ನ್ನೂ ತೆಗೆಸಿನೋಡಿ. ನಾವು ಮಾನ್ಯ ಸಿದ್ದರಾಮಯ್ಯನವರಿಗೂ ಕೂಡ ತಕರಾರು ಮಾಡಿದ್ದೇವೆ. ಅವರು ಅನಂತರ ಎಕ್ಸ್‌ಪ್ಲೇನ್ ಮಾಡಿದ್ದಾರೆ. He has come and explained us.

ಇಲ್ಲಾ ಇಷ್ಟು ಇತ್ತು, ಇಷ್ಟು ಆಗಿದೆ. ಟ್ಯಾಕ್ಸ್, ಷೆಡ್ಯೂಲ್ 1 ರಿಂದ ಷೆಡ್ಯೂಲ್ –2ರವರೆಗೆ ಇಷ್ಟು ಸರಕನ್ನು ತೆಗೆದುಕೊಳ್ಳುತ್ತಿದ್ದೇವೆ. He has explained us. -

ಅವತ್ತೂ ಕೂಡ ನಾವು ತಕರಾರು ಮಾಡಿದ್ದೇವೆ. ತಾವು ಮಾಡಿಲ್ಲವೆಂದು ದಯವಿಟ್ಟು ತಿಳಿದುಕೊಳ್ಳಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಆಯವ್ಯಯವನ್ನು ಪಾಸು ಮಾಡಿದ ಮೇಲೆ ಆಯವ್ಯಯದಲ್ಲಿ ಏನೆಲ್ಲಾ additional resources mobilization point of view ಇಲ್ಲದೇ ಇರಬಹುದು ಅಥವಾ ಕೆಲವು ಟ್ಯಾಕ್ಸ್ ಕನ್ಸೆಸೇಷನ್ ಇರಬಹುದು. ಈಗ ವ್ಯಾಟ್ ಸಿಸ್ಟಮ್ ಬಂದ ಮೇಲೆ ಎಂಪವರ್ಡ್ ಕಮಿಟಿಯಾಗಿದೆ. ಮತ್ತು ವ್ಯಾಟ್‌ನಲ್ಲಿ ಒಂದರಿಂದ ಮತ್ತೊಂದನ್ನು ಚೇಂಜ್ ಮಾಡತಕ್ಕಂಥದ್ದು ಇದೆಲ್ಲಾ ಸಾಮಾನ್ಯವಾಗಿರುವಂತಹ ವಿಚಾರ. ಈಗ ಏನು ಆಯವ್ಯಯ ಪಾಸಾಗಿದೆ. ಈಗ ತಂದಿರತಕ್ಕಂಥ ಎಲ್ಲವನ್ನೂ ಸಹಿತ ಸಂಬಂಧಪಟ್ಟಿರುವಂತಹ ಅಮೆಂಡ್‌ಮೆಂಟ್‌ಗಳು. ಇವು ನೇರವಾಗಿ ಸಂಬಂಧಪಟ್ಟಿರುವಂತಹ ಅಮೆಂಡ್‌ಮೆಂಟ್‌ಗಳಾಗಿವೆ. ಆದರೆ ನಾನೇನು ಸಜೆಸ್ಟ್ ಮಾಡುತ್ತೇನೆಂದರೆ, ಮುಂಚೆ ಆಯವ್ಯಯ ಪಾಸ್ ಆದ ಸಂದರ್ಭದಲ್ಲಿಯೂ ಸಹಿತ ನನಗೆ ಜ್ಞಾಪಕವಿದೆ, ಅವರು ಸೀಗೆಕಾಯಿಪುಡಿಗೆ ಸಂಬಂಧಪಟ್ಟಂತೆ ಒಂದು ಅಮೆಂಡ್‌ಮೆಂಟ್‌ನ್ನು ಅದು ಬಡ್ಜೆಟ್ಟಿನಲ್ಲಿರಲಿಲ್ಲ. ಆಗ ಸಂಬಂಧಪಟ್ಟಂಥ ಮಂತ್ರಿಗಳು ಎದ್ದು ನಿಂತುಕೊಂಡು ಅಥವಾ ಸರ್ಕಾರದ ಪರವಾಗಿ ಸಂಬಂಧಪಟ್ಟ ಮಂತ್ರಿಗಳಾಗದೇ ಹೋದರೆ

ಬೇರೆಯವರಾದರೂ ಸಹಿತ ಈ ಕಾರಣಕ್ಕೋಸ್ಕರ ನಾವು ಇದರಿಂದ ಇಲ್ಲಿಗೆ ತಂದಿದ್ದೇವೆ. ಕೆಲವು ಸಾರಿ ಟ್ಯಾಕ್ಸ್‌ಗಳನ್ನು ಕಡಿಮೆ ಮಾಡುತ್ತೇವೆ. ಏಕೆಂದರೆ ಬೇಸ್ ಜಾಸ್ತಿಯಾಗುತ್ತಿದೆ, ರೀಸೋರ್ಸ್ ಜಾಸ್ತಿ ಮೊಬಿಲೈಸ್ ಆಗುತ್ತದೆ. ಆದ್ದರಿಂದ each bill ಏನಿದೆ ಅದಕ್ಕೆ ಎಕ್ಸ್‌ಪ್ಲೆನೇಷನ್ ಅನ್ನು ಎರಡು ಅಥವಾ ಮೂರು ವಾಕ್ಯಗಳಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೇಳಬೇಕಾಗುತ್ತದೆ. ಒಂದು ನಿಮಿಷ ಸರ್, ನಮ್ಮ ಸಲಹೆಯನ್ನು ತೆಗೆದುಕೊಳ್ಳಿ, ನನ್ನ ಸಲಹೆ ನಿಮಗೇನು ಎಂದು ಹೇಳಿದರೆ ನಾಲ್ಕೈದು ಅಮೆಂಡ್‌ಮೆಂಟ್‌ಗಳನ್ನು ಅವರು ತೆಗೆದುಕೊಂಡು ಬಂದಿದ್ದಾರೆ. ಆದ್ದರಿಂದ ತಾವು ಈ ಹೌಸ್‌ಅನ್ನು ಅರ್ಧಗಂಟೆ ಅಡ್ಜರ್ನ್ ಮಾಡಿ ಆಫೀಸರ್ಸ್ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಅವರು ಏನು ಮಾಡಿದ್ದಾರೆಂದು ಎನ್ನುವುದನ್ನು ಬ್ರೀಫ್ ಮಾಡಲಿ. ಆಮೇಲೆ ಅವರು ಅದನ್ನು ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿ): ಸರ್ ನೋಡಿ ಇಲ್ಲಿ ಬಹಳ ಕ್ಲಿಯರ್ ಆಗಿದೆ, ಪೇಜ್ 89 ನಲ್ಲಿ reduction of the, that has come on page 16... ಬಿಲ್‌ನಲ್ಲಿದೆ, ಮತ್ತು ಪೇಜ್ 19 ಬಿಲ್ಲಿನಲ್ಲಿ ಆರನೇ ಅನುಸೂಚಿಗೆ ಪೇಜ್ 111 ರಲ್ಲಿ inclusion of schedule of works ಇದೆ, ನೀವೇ ತೆಗೆದು ನೋಡಿ. ನಾನೇ ಕೊಟ್ಟಿರುವುದು, ಪೇಜ್ 19 ರಲ್ಲಿ reduction of the .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದೊಂದು ಐಟಂಗೂ ಎಕ್ಸ್‌ಪ್ಲನೇಷನ್ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ ಅರ್ಧಗಂಟೆ ಸದನವನ್ನು ಮುಂದೂಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಡ್ಜರ್ನ್ ಮಾಡುವ ಅಗತ್ಯವಿಲ್ಲ ಸರ್, ಲಾಸ್ಟ್ ಟೈಮ್ ಏನು ಪ್ರೊಸೀಜರ್ ಫಾಲೋ ಮಾಡಿದ್ದಾರೆ, ಅದೇ ಪ್ರೊಸೀಜರ್ ಅನ್ನು ಫಾಲೋ ಮಾಡಿದ್ದೇವೆ. ಯಾವುದೇ ವ್ಯತ್ಯಾಸವಿಲ್ಲ ಸರ್.

ಶ್ರೀ ಕೆ. ಶ್ರೀನಿವಾಸಗೌಡ : ಇದನ್ನು ಪ್ರೆಸ್ಟೀಜ್ ಎಂದು ಏಕೆ ತೆಗೆದುಕೊಳ್ಳುತ್ತೀರಿ? ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿದ್ದಾರೆ ಆಗಲೇ ನೀವು ವಿವರಣೆ ಹೇಳಬಹುದಾಗಿತ್ತು, ನಿಮಗೆ ಈಗ ವಿವರಣೆ ಹೇಳಲಿಕ್ಕಾಗುತ್ತಿಲ್ಲ. ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ ನಂತರ ಬನ್ನಿ, ನೀವು ಚರ್ಚೆ ಮಾಡದೇ ವಿವರಣೆ ಕೊಡುವುದು ಕಷ್ಟವೆಂದು ನನಗೆ ಅನ್ನಿಸುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಗಾಗಲೇ ಆಯವ್ಯಯದಲ್ಲಿ ಎಕ್ಸ್‌ಪ್ಲೆನ್ ಮಾಡಿದ್ದೇನೆ. ಏನು ಮಾತನಾಡುತ್ತೀರಿ? ನಾವು ಚರ್ಚೆ ಮಾಡಲಿಕ್ಕೆ ಸಿದ್ಧವಿದ್ದೇವೆ, ನಾವು ಇಲ್ಲವೆಂದು ಹೇಳಲಿಲ್ಲ. ನೋಡಿ ಸ್ವಾಮಿ ಇದು ಒಂದನೇ ತಾರೀಖಿನಿಂದ ಜಾರಿಗೆ ಬರಬೇಕು, ಈಗ ಆ ಮನೆಗೆ ಹೋಗಿಬರಬೇಕು.

ಅಧ್ಯಕ್ಷರು : ನೋಡಿ, ಗೌಡರೇ, ಈಗ ಆ ಮನೆಗೆ ಹೋಗಿಬರಬೇಕು, ಬಜೆಟ್ ಪಾಸ್ ಆಗಬೇಕು, ಆ ಕಾರಣದಿಂದ ಬಜೆಟ್ ಪಾಸಾಗಬೇಕಾಗಿದೆ. ತಿದ್ದುಪಡಿಗಳೂ ಸಹ ಅದರೊಂದಿಗೆ ಪಾಸ್ ಆಗಬೇಕು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಈ ಕೋಪವನ್ನು ತಾವು ಬಿಡಬೇಕಾಗುತ್ತದೆ, ದಯಮಾಡಿ ಸದಸ್ಯರನ್ನು ಕನ್‌ವಿನ್ಸ್ ಮಾಡಿ. ಅವರು ನಮ್ಮ ಕಡೆ ಕೈ ಮಾಡಿ ತೋರಿಸಿದರೆ ಏನರ್ಥ?

ಅಧ್ಯಕ್ಷರು : ಆಯಿತು, ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ : ಆಯಿತು ಅಂದ್ರೆ ಹೇಗ್ರಿ? ನಾವು ಹೇಳುವುದನ್ನು ಅರ್ಥ ಮಾಡಿಕೊಳ್ಳಿ. ದಯಮಾಡಿ ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಸರಿಯಾದ ಮಾಹಿತಿ ಕೊಡಿ ಎಂದು ಹೇಳುತ್ತಿದ್ದಾರೆ. why not you convince us?

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ನಿಮಗೆ ಕೇಳಲಿಕ್ಕಾಗದಿದ್ದರೆ ಸದನದಿಂದ ವಾಕೌಟ್ ಮಾಡುವುದಾದರೆ ಮಾಡಿ _ _

(ಗೊಂದಲ)

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡ ತೊಡಗಿದರು)

ಅಧ್ಯಕ್ಷರು : ಈಗ ಬಡ್ಜೆಟ್ ಪಾಸಾಗಬೇಕು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನಾನು ಇದನ್ನು ಮತಕ್ಕೆ ಹಾಕುತ್ತಿದ್ದೇನೆ. ಈಗ ಪರ್ಯಾಯಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ದಯಮಾಡಿ ಕುಳಿತುಕೊಳ್ಳಿರಿ, ಬಡ್ಜೆಟ್ ಪಾಸ್ ಆಗಬೇಕು. ಕುಳಿತುಕೊಳ್ಳಿ.

(ಗೊಂದಲ)

(ನಾಲ್ಕೈದು ಜನ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಿದರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2006 ಅನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಶ್ರೀ ಜೆ.ಸಿ.ಮಾಧುಸ್ವಾಮಿ : ಸರ್ಕಾರಕ್ಕೆ **xx** ಏನ್ ಮಾಡುತ್ತಿದ್ದೀರಿ ಅಧ್ಯಕ್ಷರೆ,

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2ರಿಂದ 38 ವರೆಗೆ .

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ಖಂಡ 2 ರಿಂದ 38 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 38 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಏನಾಗುತ್ತದೆ ಸರ್, ಈ ಹೌಸ್‌ನಲ್ಲಿ ಏನು ನಡೆಯುತ್ತಿದೆ, ಅಧ್ಯಕ್ಷರೆ ಏನು ಮಾಡಲಿಕ್ಕೆ ಹೊರಟಿದ್ದೀರಿ? **xx** ಬಿಲ್ ಎಕ್ಸ್‌ಪ್ಲೇನ್ ಮಾಡದೇ ಪಾಸ್ ಮಾಡುವುದು ಎಂದರೆ ಏನರ್ಥ?

---

xx ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಿಲ್ಲ ಅಧ್ಯಕ್ಷರೇ,

(ಗೊಂದಲ)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

(ಈ ಹಂತದಲ್ಲಿ ಹಲವಾರು ಮಾನ್ಯ ಸದಸ್ಯರು ಹಾಗೂ ವಿರೋಧ ಪಕ್ಷದ ಮುಖಂಡರುಗಳು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು. ನಂತರ ಕಾಂಗ್ರೆಸ್ ಪಕ್ಷದ ಸದಸ್ಯರು, ಜನತಾ ದಳ (ಯು)ನ ಶ್ರೀ ಜೆ.ಸಿ. ಮಾಧುಸ್ವಾಮಿ ಮತ್ತು ಇತರೆ ಸದಸ್ಯರು, ಕನ್ನಡ ಚಳುವಳಿ ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು, ಸಿ.ಪಿ.ಎಂ.ನ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು, ಪಕ್ಷೇತರ ಸದಸ್ಯರಾದ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ, ರಿಪಬ್ಲಿಕನ್ ಪಕ್ಷದ ಸದಸ್ಯರಾದ ಶ್ರೀ ಆರ್. ರಾಜೇಂದ್ರನ್ ಅವರು ಮತ್ತು ಸಿದ್ಧರಾಮಯ್ಯನವರು ಮತ್ತಿತರ ಸದಸ್ಯರು ಸದನದಿಂದ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ (ಹಣಕಾಸಿನ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2006ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

(ಗೊಂದಲ)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

(ಗೊಂದಲ)

(ಇ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2006

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2006ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."